Koravanji

ಕೊರವಂಜಿ

ಡಿಸೆಂಬರ್ ೧೯೪೫



ಸಂಪಾದಕರು :
ಶ್ರೀ|| ರಾ. ಶಿ.

ಚಿತ್ರಕಾರರು :
ಶ್ರೀ ಆರ್. ಕೆ. ಲಕ್ಷ್ಮಣ್

ಬರಹಗಾರರು :


ಶ್ರೀ|| ರಾ ವೆಂ. ಶ್ರೀ.
ಶ್ರೀ|| ಗಂಗಾಧರ.
ಶ್ರೀ|| ಬೀ.
ಶ್ರೀ|| "ಕೇಫ್".
ಶ್ರೀ|| ಬುಳ್ಳ.
ಶ್ರೀ|| ಶ್ರೀಕಾಂತ.
ಶ್ರೀ|| ಡಿ. ವೆಂಕಟೇಶಮೂರ್ತಿ.

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

ಕೊರವಂಜಿ


ವಿಷಯಾನುಕ್ರಮಣಿಕೆ


ಮುಖದ ಸೌಂದರ್ಯಕ್ಕೆ
FOR THE SKIN
"RAJA" (REGD) SNOW
for Beauty & Complexion
MANYAM & CO
MADRAS
'RAJA' (REGD) SNOW
Removes roughness and makes the skin soft and white and is delicate application for pimples
ರಾಜಾ ಸ್ನೋ
ಮಣ್ಯಂ ಅಂಡ್ ಕೋ,
ಮದರಾಸು — — ಬೆಂಗಳೂರು

ಕತ್ತಿಗಳನ್ನು ಕರಗಿಸಿ ನೇಗಿಲಿನ ಕುಳಗಳನ್ನು ತಯಾರಿಸುವ ಮತ್ತು

ಯುದ್ಧದ ಟ್ಯಾಂಕುಗಳು ಟ್ರಾಕ್ಟರುಗಳಾಗಿ

ರೂಪಾಂತರವನ್ನು ಹೊಂದುವ ಕಾಲವು ಪ್ರಾಪ್ತವಾದಾಗ..



ದೇಶದ ಎಲ್ಲಾ ಭಾಗಗಳಲ್ಲಿಯೂ ಮೃತ್ಯುಕಾರಕ ಫಿರಂಗಿಗಳ ಶಬ್ದಗಳ ಬದಲಾಗಿ, ಟ್ರಾಕ್ಟರುಗಳ ಗಡಗಡ ಶಬ್ದದ ಪ್ರತಿಧ್ವನಿಯು ಆವರಿಸುವುದು .. ಇಂಡಿಯಾದ ವಿಸ್ತಾರವಾದ ಜಮೀನುಗಳಲ್ಲಿ, ನಿದ್ರೆಯಿಂದ ಎಚ್ಚತ್ತವರ ಚಟುವಟಿಕೆಯು ಗೋಚರಿಸುತ್ತಿದೆ ಅತ್ಯಂತ ಶ್ರಮ, ಅತ್ಯಲ್ಪ ಫಲ, ಇದೇ ಮಾಮೂಲಾಗಿದ್ದ, ಮರದ ನೇಗಿಲು, ಗುದ್ದಲಿ, ಕುಡಗೋಲು, ಇವುಗಳ ದಿನಗಳು ಕಳೆದು ಹೋಗಿರುತ್ತವೆ ಇವುಗಳ ಬದಲಾಗಿ, ಉಕ್ಕಿನ ನೇಗಿಲುಗಳು, ಪೈರನ್ನು ಕಟಾಯಿಸುವ ಯಂತ್ರಗಳು, ಕಂತೆ ಕಟ್ಟುವ ಮೆಷೀನುಗಳು, ಮತ್ತು ಟ್ರಾಕ್ಟರುಗಳು ಇವುಗಳು ರೂಢಿಗೆ ಬಂದು, ರೈತರ ಶ್ರಮವನ್ನು ಬಹಳ ಕಡಿಮೆಮಾಡಿ, ಜಮೀನುಗಳ ಉತ್ಪತ್ತಿಯನ್ನು ಹೆಚ್ಚಿಸಿ, ಅವರ ಲಾಭವನ್ನು ವೃದ್ಧಿಮಾಡಿರುತ್ತವೆ

ಇದು, ಇಂದು ನಮ್ಮ ಮನಸ್ಸಿಗೆ ಗೋಚರವಾಗುವ ನಾಳಿನ ಚಿತ್ರವಾಗಿರುತ್ತದೆ. ಐಶ್ವರ್ಯವಂತರು ಸಂಗ್ರಹಿಸುವ ಲಕ್ಷಾಂತರ ರೂಪಾಯಿಗಳಲ್ಲ, ಬಡವರು ಕೂಡಿಡುವ ಕೋಟ್ಯಾಂತರ ರೂಪಾಯಿಗಳ ಸಹಾಯದಿಂದಲೇ, ಮೇಲ್ಕಂಡ ಚಿತ್ರವು ವಾಸ್ತವ್ಯವಾಗಿ ಪರಿಣಮಿಸುವುದು ಅಗಾಧವಾದ ಬಂಡವಾಳದ ಬೆಂಬಲವಿದ್ದ ಹೊರತು ಇಂಡಿಯಾ ದೇಶೀಯರು ಗಣ್ಯರಾಗಿಯೂ, ಐಶ್ವರ್ಯವಂತರಾಗಿಯೂ, ಆಗಲಾರರೆಂಬ ವಿಚಾರವನ್ನು ನೀವು ಸ್ಪಷ್ಟವಾಗಿ ತಿಳಿಯಬೇಕು ಇಂಡಿಯಾದ ಕೃಷಿ ಮತ್ತು ಔದ್ಯೋಗಿಕ ಕಾರ್ಯಗಳು ಅಭಿವೃದ್ಧಿಯಾಗಬೇಕಾದರೆ, ಯುದ್ಧೋತ್ತರ ದಿನಗಳಲ್ಲಿ, ನೀವು ಉಳಿತಾಯ ಮಾಡುವ ಹಣವು ಅವಶ್ಯಕ ಮುಂದೆ ಪ್ರಾಪ್ತಿಯಾಗುವ ಸುಖಸಂಪತ್ತಿನಲ್ಲಿ ನಿಮ್ಮ ಹಿಸ್ಸೆಯನ್ನು ಕೊಂಡುಕೊಳ್ಳಲು ಈಗಲೇ ತಯಾರಾಗಿರಿ

ನಾಳೆಗಾಗಿ ಇಂದಿನ ದಿನವೇ ಏರ್ಪಾಡು ಮಾಡಿರಿ ನಿಮ್ಮ ಶಕ್ತಿಯಿದ್ದಷ್ಟು ಉಳಿತಾಯ ಮಾಡಿರಿ.

ಆದರೆ ನೀವು ಕೂಡಿಟ್ಟದ್ದನ್ನು, ಸುರಕ್ಷಿತವಾಗಿಯೂ ನಿಮಗೆ ಬೇಕಾದಾಗ ಸುಲಭವಾಗಿ ಸಿಕ್ಕುವಂತೆಯೂ, ವಿನಿಯೋಗಿಸಬೇಕೆಂಬುದನ್ನು ಸ್ಮರಣೆಯಲ್ಲಿಡಿರಿ

ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು ಗೌರ್ನಮೆಂಟು ಲೋನುಗಳು, ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕು ಅಕೌಂಟುಗಳು ವಿಮೆ, ಪರಸ್ಪರ ಸಹಾಯಕ ಸಂಘಗಳು ಮತ್ತು ಸೇವಿಂಗ್ಸ್ ಬ್ಯಾಂಕು ಅಕೌಂಟುಗಳು, ಇವುಗಳು ಭದ್ರವಾದ ಮತ್ತು ಲಾಭಕರವಾದ ದ್ರವ್ಯ ವಿನಿಯೋಗ ಮಾರ್ಗಗಳಾಗಿರುತ್ತವೆ. ಜಮೀನುಗಳು ಕಟ್ಟಡಗಳು, ವ್ಯಾಪಾರದ ಸರಕುಗಳು ಕೈಗಾರಿಕೆ ಸಾಮಾನುಗಳು, ಆಭರಣಗಳು ಇತ್ಯಾದಿಗಳನ್ನು ಕೊಂಡುಕೊಳ್ಳುವುದರಲ್ಲಿ ನಿಮ್ಮ ಬಂಡವಾಳವನ್ನು ಹಾಕಬೇಡಿರಿ ಪ್ರಕೃತ ಪರಿಸ್ಥಿತಿಯಲ್ಲಿ, ಅವುಗಳ ಬೆಲೆಗಳು ಅವುಗಳ ಯೋಗ್ಯತೆ ಮೀರಿದವುಗಳಾಗಿರುತ್ತವೆ, ಮತ್ತು ಬಹುಮಟ್ಟಿಗೆ ಇಳಿಯುವ ಸಂಭವಗಳಿರುತ್ತವೆ.

ನಿಮ್ಮ ಭವಿಷ್ಯೋಪಯೋಗಕ್ಕಾಗಿ ಉಳಿತಾಯ ಮಾಡಿ ಭದ್ರಪಡಿಸಿರಿ.

ಗೌರ್ನಮೆಂಟ್ ಆಫ್ ಇಂಡಿಯಾದ ಫಿನಾನ್ಸ್ ಡಿಪಾರ್ಟ್‌ಮೆಂಟಿನಿಂದ ಪ್ರಕಟಿಸಲ್ಪಟ್ಟಿರುತ್ತದೆ AAA 154 KN

ಬೆಂಗಳೂರು ಮೂವಿಲ್ಯಾಂಡ್ ಟಾಕೀಸಿನಲ್ಲಿ



ಜಯಪ್ರದವಾಗಿ
ಪ್ರದರ್ಶಿತವಾಗುತ್ತಿದೆ.
ಸಾರಥಿಯವರ
ಅಮೋಘ ತೆಲುಗು
ವಾಕ್ಪಟ

ತಾರಾಗಣ

ಕನ್ನಾಂಬ
ಶಾಂತಕುಮಾರಿ
ವರಲಕ್ಷ್ಮಿ
ರಾಜಮ್ಮ
ಸಿ. ಎಸ್. ಆರ್.
ಜಿ. ವಿ. ಸುಬ್ಬರಾವ್
ಲಂಕಾಸತ್ಯಂ
ಮೊದಲಾದವರು

ನಮ್ಮ ಮುಂದಿನ ಚಿತ್ರ

ನಾಯಕುರಾಲು


ಅಥವಾ

ಪಲ್ನಾಡು ಸಮರ (ತೆಲುಗು)

ಭೂಮಿಕೆ:—ಕನ್ನಾಂಬ, ಜಿ. ವಿ. ಸುಬ್ಬರಾವ್, ನಾಗೇಶರಾವ್
ಮತ್ತಿತರರು

ದಿಗ್ದರ್ಶಕರು : ಜಿ. ರಾಮಬ್ರಹ್ಮಂ

Vijayalakshmi RELEASES



ಸಂಪುಟ ೪ | ಡಿಸೆಂಬರ್ ೧೯೪೫ | ಸಂಚಿಕೆ ೯

ಕುಹಕಿಡಿಗಳು

—o—

ಖಾಸ್‌ಬಂಗಲೆಯಲ್ಲಿ ಒಂದು ಹುಲಿಯು ಒಂದು ಸಿಂಹವನ್ನು ಕೊಂದು ಹಾಕಿದಂತೆ.

— ಬ್ರಿಟಿಷ್ ಸಿಂಹವೇ ? ಅಥವಾ ಬಂಗಾಳಾ ಹುಲಿಯೇ.

* * *

ಅಖಿಲ ಮೈಸೂರು ಮಹಿಳಾ ಸಮ್ಮೇಳನದಲ್ಲಿ 'ಹೋಂ ರೂಲು' ದೃಶ್ಯಗಳನ್ನು ಬಹಿರಂಗವಾಗಿ ಪ್ರದರ್ಶಿಸಿದರಂತೆ.

* * *

ಬರ್ಮಾದಿಂದ ೨೦,೦೦೦ ಟನ್ ಅಕ್ಕಿ ನಮ್ಮ ದೇಶಕ್ಕೆ ಬರುತ್ತದಂತೆ.

—ರಾಗಿ ಎಷ್ಟು ಟನ್ ಬರುತ್ತೆ ಎಂದು ನಮ್ಮವರು ಲೆಕ್ಕ ಹಾಕುತ್ತಿದ್ದಾರಂತೆ.

* * *

ಕಲ್ಕತ್ತಾದಲ್ಲಿ ಪೌರಸಭಾ ನೌಕರರೂ, ವಾಹನಾದಿಗಳ ಕೆಲಸಗಾರರೂ ಮುಷ್ಕರ ಹೂಡಿದ್ದಾರಂತೆ.

—ಜೈಹಿಂದ್ ಫೌಜಿನವರೊಡನೆ ಇವರೆಲ್ಲರನ್ನು ವಿಚಾರಣೆಗೆ ಗುರಿಮಾಡುತ್ತಾರೆಂಬುದು ಶುದ್ಧ ಸುಳ್ಳಂತೆ.

* * *

ವಿಶ್ವವಿದ್ಯಾಲಯದ ಚಟುವಟಿಕೆಗಳು—

—ಇತ್ತೀಚಿನ ಚಟುವಟಿಕೆಗಳನ್ನು ನೋಡಿದರೆ ವಿಶ್ವವಿದ್ಯೆಯು ಲಯವೇ ;

*　　*　　*

ಪರೀಕ್ಷೆಗಳಲ್ಲಿ ಫಸ್ಟ್‌ಕ್ಲಾಸುಗಳನ್ನು ಹೆಚ್ಚಾಗಿ ಕೊಡಬೇಕು—

—ಫಸ್ಟ್‌ಕ್ಲಾಸುಗಳು ಕೊಡುವ ಪದಾರ್ಥವೋ ತೆಗೆದುಕೊಳ್ಳುವ ಪದಾರ್ಥವೋ ?

*　　*　　*

ಡಿಸೆಂಬರ್ ಎರಡನೆಯ ತಾರೀಖು ಭಾರತದಲ್ಲೆಲ್ಲಾ, ಭಾರತದ ಹಿತಕ್ಕಾಗಿ "ಪ್ರಾರ್ಥನಾ ದಿನ"ವನ್ನಾಗಿ ಆಚರಿಸಬೇಕೆಂದು ಬ್ರಿಟನ್ನಿನ ಕ್ರೈಸ್ತ ಪ್ರಮುಖ ಪುರೋಹಿತರೆಲ್ಲಾ ಮನವಿಮಾಡಿಕೊಂಡಿದ್ದಾರೆ.

—ಭಾರತದ ಹಿತರಕ್ಷಣೆ ಅಂದರೆ ಭಾರತವು ಐಶ್ವರ್ಯದಿಂದ ತುಂಬಿರಲಿ. ನಮಗಾಗಿ—

*　　*　　*

ಜನಾಬ್ ಜಿನ್ನಾರವರು ಗಡಿನಾಡಿನಲ್ಲಿ ಮಾತನಾಡುತ್ತ 'ನಾನು ಪಾಕಿಸ್ತಾನವನ್ನು ನೋಡಿಯೇ ಸಾಯುತ್ತೇನೆ' ಎಂದರಂತೆ.

—ಓಹೋ ! ೧೨೫ ವರ್ಷ ಬದುಕಬೇಕೆಂಬುದನ್ನು ಯಾರಿಂದ ಕಲಿತರೊ ?

*　　*　　*

ಜೋಸೆಫ್ ಸ್ಟಾಲಿನ್ ಎಲ್ಲಿ ? ಈ ಗುಟ್ಟು ಬಯಲಾಗಿಲ್ಲವಂತೆ—

—ಆಟಂ ಬಾಂಬು ಗುಟ್ಟು ಬಯಲಾಗುವ ತನಕ, ಆ ಗುಟ್ಟೂ ರಟ್ಟಾಗದೇ ?

*　　*　　*

ಕನ್ನಡ ಸಾಹಿತ್ಯಪರಿಷತ್ತಿನ ವಾರ್ಷಿಕ ಸಭೆಯು ಮದರಾಸಿನಲ್ಲಿ ಸೇರುತ್ತದೆಯಂತೆ.

—ಅಲ್ಲಿ ಎತ್ತುಗಳಿಲ್ಲವಲ್ಲಾ ! ಮೆರವಣಿಗೆಗೆ ಏನು ಏರ್ಪಾಡೋ ?

— —

ಉರಿಗಾಳು

ಜಾವಾ ದೇಶವನ್ನು ಡಚ್ಚರಿಗೊಪ್ಪಿಸಿದ ಕೂಡಲೇ ಮತ್ತೊಂದು ವಿ-ಜೆ ದಿನೋತ್ಸವ ಒರಬಹುದಂತೆ.

* * *

ಸತ್ಯಮಂಗಲಕ್ಕೆ ರೆಲು ಇಷ್ಟರಲ್ಲೇ ಹಾಕಬಹುದಂತೆ.. ಮದ್ರಾಸಿನ ರಿಟೈರ್ಡ್ ಅಧಿಕಾರಿಗಳಿಗೆ ನುಗ್ಗಲೊಂದು ದಾರಿ ಮಾಡಿಕೊಟ್ಟ ಹಾಗಾಯಿತು.

* * *

ನಮ್ಮ ಸಂಸ್ಥಾನದಲ್ಲಿರುವಷ್ಟು ಪಶುಸಂಪತ್ತು ಇನ್ನೆಲ್ಲಿಯೂ ಇಲ್ಲ (ಅಧಿಕಾರಿಗಳೊಬ್ಬರ ಉಪನ್ಯಾಸ).... ಹೌದು, ನಿಜ.

* * *

ಹಿಂದೆ ಪೋರ್ಟರ್ ಚಾಕರಿ ಮಾಡುತ್ತಿದ್ದವರೊಬ್ಬರು ಈಗ ಬಂಗಾಳಾ ಗವರ್ನರಾಗಿ ನೇಮಕವಾಗಿದಾರೆ ... ಅವರನ್ನು ಸ್ವಾಗತಿಸಲು ಪ್ರತಿ ರೈಲು ಸ್ಟೇಷನ್ನಲ್ಲೂ ಅವರೇ ಕಾದಿರುತ್ತಾರೆ.

* * *

ಕೆನಡಾದೇಶದವರಿಗೂ ಯೂನಿಯನ್ ಜಾಕ್ ಬಾವುಟ ಬೇಡವಂತೆ . ಸರ್ವೇ ಜನಾಃ ಲಾಂಛನಮಾಸಯಂತಿ

* * *

"ಮಂತ್ರಿಗಳ ಆಗಮನಕ್ಕೆ ಅಪೂರ್ವ ಸಿದ್ಧತೆ" (ಬಾತ್ಮಿ) ಹಾಗಾದರೆ, ಅವರು ಹೋಗದಿರುವುದೇ ಮೇಲು.

* * *

ಬಂಗಾಳದಲ್ಲಿ ಬರಗಾಲದ ಗವರ್ನರಾಗಿದ್ದ ಆಸ್ಟ್ರೇಲಿಯಾದೇಶದ ಕೇಸಿ ಎಂಬವರು ಈಗ ರಾಜೀನಾಮೆ ಕೊಟ್ಟು ಸ್ವದೇಶಕ್ಕೆ ಹೊರಡುತ್ತಾರಂತೆ ...'ಹೋಗಿಬನ್ನಿ" ಎಂಬ ಉಪಚಾರದ ಮಾತನ್ನು ಕೂಡ ನಾವು ಅವರಿಗೆ ಹೇಳುವ ಹಾಗಿಲ್ಲವಲ್ಲಾ.

* * *

" ವಿದೇಶಗಳಲ್ಲಿ ಚಿತ್ರನಿರ್ಮಾಣದ ಸ್ಥಿತಿಗತಿಗಳನ್ನು ತಿಳಿದುಬರಲು ಹೋಗಿದ್ದ ಭಾರತೀಯ ಚಲಚ್ಚಿತ್ರ ನಿರ್ಮಾಪಕ ಮಂಡಲಿಯವರು ಹಿಂದಕ್ಕೆ ಬಂದಿದಾರೆ" (ಪತ್ರಿಕೆ)....ಇನ್ನು ಅವರು ಚಿತ್ರ ತೆಗೆಯುವುದಿಲ್ಲ ಎಂಬುದೇ ನಮ್ಮ ಊಹೆ.

* * *

" ಸುಪ್ರಸಿದ್ಧ ಜನಪ್ರಿಯ ಕನ್ನಡ ಚಿತ್ರ " (ಜಾಹಿರಾತು)....ಅಪ್ರಸಿದ್ಧ ಜನರು ಏನು ಹೇಳುತ್ತಾರೆ ಎಂಬುದೇ ವರಮಾನದ ದೃಷ್ಟಿಯಿಂದ ಬಹುಮುಖ್ಯ.

* * *

" ಇಂಗ್ಲೆಂಡ್ ದೇಶ ಇನ್ನು ೪೦ ಸಾವಿರ ವರ್ಷಗಳೊಳಗೆ ಸಮುದ್ರದಲ್ಲಿ ಮುಳುಗಿಹೋಗುತ್ತೆ " (ಭೂಶಾಸ್ತ್ರ ಗ್ರಂಥ)....ಅಷ್ಟರೊಳಗೆ ನಾವು ಕೈಬಿಟ್ಟುಬಿಡಬೇಕು.

* * *

" ಈಚೆಗೆ ಮುಖ್ಯ ತಾರತಾರೆಯರು ಹಾಡುತ್ತಲೇ ಇಲ್ಲ, ಧ್ವನಿದಾನಿಗಳ ಹಾಡೇ ನಮಗೆ ಕೇಳಿಬರುವುದು " ಪತ್ರಿಕೆ....ಹಾಗಾದರೆ, ತಾರತಾರೆಯರೇ ಹಾಡುವುದು ಮೇಲು ಎಂದೆನಿಸುತ್ತದೆ.

* * *

" ಯುದ್ಧಾನಂತರದ ಕದನಗಳಲ್ಲಿ ಅಮೇರಿಕನ್ ಮದ್ದುಗುಂಡುಗಳನ್ನು ಪ್ರಯೋಗಿಸುವಾಗ ಅವುಗಳ ಮೇಲಿನ ಯು. ಎಸ್. ಎ. ಲೇಬಲ್‌ಗಳನ್ನು ಕಿತ್ತುಬಿಡಬೇಕೆಂದು ಅಧ್ಯಕ್ಷ 'ಟ್ರೂ'ಮನ್‌ರವರು ಹೇಳಿದಾರೆ "....ಭಲಾ! ಸತ್ಯ ಹರಿಶ್ಚಂದ್ರ!

* * *

" ನಾನು ಸಿನಿಮಾ ನಟನನ್ನೇ ಮದುವೆಯಾಗುತ್ತೇನೆ " (ಸಿನಿಮ ತಾರೆ ಒಬ್ಬಳ ಸಂಕಲ್ಪ)....ನಾವು ಸಿನಿಮಾಕ್ಷೇತ್ರಕ್ಕೆ ಕೊಂಚ ತಡವಾಗಿಯೇ ನುಗ್ಗೋಣ.

* * *

"ಪರಮಾಣು ಬಾಂಬು, ಹಡಗುಗಳ ಮೇಲಿರುವವರಿಗೆ ಹಾನಿ ಮಾಡಲಾರದು" (ಸಂ. ಸಂ. ಮಹಾನೌಕಾಧಿಕಾರಿ)....ಇದನ್ನು ನಂಬಿದವರೆಲ್ಲ ನೀರುಪಾಲು.



‘ ಯಾಕ್ರೀ ಇಷ್ಟು ಇಳಿ ಮುಖ ?’

‘ ಅಯ್ಯೋ ನನ್ನ ರೇಷನ್ ಕಾರ್ಡ್ ಕಳೆದುಕೊಂಡೆ ’

‘ ಎಲ್ಲಿ ಕಳಕೊಂಡಿರಿ ?’

‘ ಮಂಗಳವಾರ ನಮ್ಮ ಕಡೇ ಹುಡುಗ ಡಿಪೋಗೆ ಅದನ್ನು ತೆಗೆದುಕೊಂಡು ಹೋದ. ಇನ್ನೂ ಬಂದೇ ಇಲ್ಲ.... ’

ರಾಜೀವಪುರದಲ್ಲಿ "ರೇಷ್ಮ್ಯೋ" ......

[ಒಂದು ಮನೆಯಲ್ಲಿ ಹತ್ತು ಜನರಿದ್ದಾರೆ ಅನ್ನಿ. ಮನೆಗೆ ೧೦ ಬಾಳೇಹಣ್ಣು ತಂದಿದ್ದಾರೆ ಅನ್ನಿ. ಇದ್ದವರಿಗೆಲ್ಲಾ ತಲಾ ಒಂದರಂತೆ ಹಂಚಿದರೆ ಸಮಾನತೆ ಅಲ್ಲವೇ? ನಿಷ್ಪಕ್ಷಪಾತ ಅಲ್ಲವೇ? ತಂದೆ ಕಡೆಯವರಾಗಲಿ ತಾಯಿ ಕಡೆಯವರಾಗಲೀ ಹುಟ್ಟಿದವರಾಗಲೀ, ಕಟ್ಟಿರೆ ಬಂದವರಾಗಲೀ, ಸಂಸಾರದಲ್ಲಿದ್ದರು ಆದ ಮೇಲೆ ಇದ್ದುದರಲ್ಲಿ ಸಮಾನ ಭಾಗ್ಯ ಪಡೆಯಲಿ ಬೇಕು ಅಲ್ಲವೇ?

ರಾಜೀವಪುರ ಒಂದು ದೊಡ್ಡ ಸಂಸಾರ ಇದ್ದ ಹಾಗೆ, ಇದರಲ್ಲಿ ಶೇಕಡ ೯೬ ತಂದೆ ಕಡೆಯವರು ಕೇವಲ ೪ ಮಲತಾಯಿ ಕಡೆಯವರು ಅನ್ನಿ. ೯೬ ಬಾಹುಳ್ಯದವರೆಲ್ಲರೂ ಸೇರಿಕೊಂಡು, ಒಂದು ಕಾನೂನು ಮಾಡಿದರು. ಈ ಸಂಸಾರದಲ್ಲಿರುವವರಿಗೆಲ್ಲಾ ಮನೆಗೆ ಬಂದಿದ್ದನೆಲ್ಲಾ, ತಂದಿದ್ದನೆಲ್ಲಾ ಸಮಾನವಾಗಿ ಹಂಚಬೇಕು. ಅಂದರೆ ತಂದೆ ಕಡೆಯವರಿಗೆ ೯೬ ಶೇಕಡ. ಮಲತಾಯಿ ಕಡೆಯವರಿಗೆ ೪ ಶೇಕಡ. ಈ ಕಾನೂನೂ ಶೇಕಡ ೯೬ರಿಂದ ಅನುಮೋದಿಸಲ್ಪಟ್ಟಿತು

ರಾಜೀವಪುರ ಹೆಸರಾಂತ ಪ್ರಗತಿಗಾಮಿ ಪುರ. ಇದನ್ನು ನೋಡಿಕೊಂಡೇ ಇತರ ಪುರದವರೂ ಸ್ಫೂರ್ತಿ ಹೊಂದುತ್ತಿದ್ದರು. ಆದರೆ ಇತ್ತೀಚೆಗೆ ಪುರಪಾ ಸಭಾ ರಾಜರಿಂದ ಅಜ್ಞೆ ಪಡೆದು, ಅವರ ಹಾದಿಯನ್ನೇ ಹಿಡಿದು ಈ ಕಾನೂನು ಕಾಲು ಹಾಕಲಾರಂಭಿಸಿತ್ತು.]

— ಆಸ್ಪತ್ರೆಯಲ್ಲಿ —

ರೋಗಿ:—ಸ್ವಾಮಿ, ೪ ದಿನಗಳಿಂದ ಹೊಟ್ಟೆ ನೋವುತ್ತಿದೆ–ಇವತ್ತು ಬೆಳಿಗ್ಗೆ ರಕ್ತ ವಾಂತಿಯಾಯಿತು. ನಾನು ಹದಿನಾರು ಮೈಲಿ ಆಚೆ ಹಳ್ಳಿಯಿಂದ ಬಂದಿದ್ದೇನೆ. ದಯವಿಟ್ಟು ನನ್ನನ್ನು ಆಸ್ಪತ್ರೆಗೆ ಸೇರಿಸಿಕೊಳ್ಳಬೇಕು—

ವೈದ್ಯ :—ನಿಮ್ಮ ಹೆಸರೇನ್ರಿ.

ರೋಗಿ :—ಆರ್ಯಪುತ್ರ.

ವೈದ್ಯ :—ನೀವು ಯಾವ ಜಾತಿ ಕಣ್ರೀ

ರೋಗಿ :—ನಾನು ಬ್ರಹ್ಮ ಕುಲದವನು.

ವೈದ್ಯ :—ಏನ್ರಿ ಬ್ರಹ್ಮ ಕುಲವೋ ಸಾಚಾ ಬ್ರಾಹ್ಮಣರೋ?

ರೋಗಿ :—ಹೊಟ್ಟೆ ನೋಯುತ್ತಿವೆ ವೈದ್ಯರೇ, ನನ್ನ ಜಾತಿ ಕಟ್ಟಿಕೊಂಡು ಏನಾಗಬೇಕು, ರಕ್ತ ಕಾರಿದ್ದೆ. ಬೆಳಿಗ್ಗೆ

ವೈದ್ಯ :—ಹಾಗಲ್ಲರೀ, ನೀವು ರಕ್ತ ಕಾರಿದರೇನು ವಿಷ ಕಕ್ಕಿದರೇನು, ನಮಗೆ ಹೊಸ ಕಾನೂನು ಬಂದಿವೆ ಶೇಕಡ ನಾಲ್ಕರಂತೆ ಬ್ರಾಹ್ಮಣರನ್ನು ಆಸ್ಪತ್ರೆಗೆ ಸೇರಿಸಿಕೊಳ್ಳಬೇಕು ಎಂದು. ಇವತ್ತು ನಾಲ್ಕು ಜನ ಬ್ರಾಹ್ಮಣರು ಆಗಲೇ ಸೇರಿದ್ದಾರೆ ಇನ್ನು ೯೬ ಜನ ತಂದೆ ಕಡೆಯವರು ದ್ರಾವಿಡರು ಸೇರಿದ ಮೇಲೆ ನಿಮ್ಮ ಮಾತು ಹೊರಗೇ ಕುಳಿತಿರಿ, ಅಗೋ ಅಲ್ಲಿದೆ ಅಶ್ವತ್ಥಮರ. ಅದರ ನೆರಳಿನಲ್ಲಿ, ನಾಗ ಪ್ರತಿಮೆ ಒರಗಿಕೊಂಡು ಕೂತಿರಿ. ೯೬ ದಾಖಲಾದರೆ ನಂತರ ನಿಮ್ಮ ಸರ್ತಿ ಆಗ ಕೂಗುತ್ತೇನೆ.

—ಹೊರಡಿ.

ರೋಗಿ·—ಅಯ್ಯೋ ದೇವರೆ? ಹೊಟ್ಟೆ ನೋವಿನ ಜತೆಗೆ ಹೊಟ್ಟೆ ಬೇರೆ ಉರಿಸುತ್ತಾರಲ್ಲ.–ಇವರ ಮನೆ.... .. ಛೀ–ಛೀ ನಾನು ಸಂಸ್ಕೃತಿಯ ಪ್ರತಿನಿಧಿ, ನಾನು ಶಪಿಸುವುದೇ? ಛೀ, ಛೀ–ವಿಪ್ರವಾಕ್ಯ ಸಿದ್ಧಿಸಿಬಿಟ್ಟರೆ–ನನ್ನ ತಮ್ಮಂದಿರನ್ನು ನನ್ನ ಮನೆಯವರನ್ನು ನಾನೇ ಕುರುಕ್ಷೇತ್ರಕ್ಕೆ ಅಟ್ಟಲೇ–ಆದಾಗದು, ಅದಾಗದು—ರೋಗಿ ಅಶ್ವತ್ಥದ ನೆರಳಿನಲ್ಲಿ ಕಾಲ ಸೂಚಿಯಾದ ನಾಗನ ಬೆಂಬಲ ಪಡೆದು ಒರಗುವನು.

* * *

ಮಟಮಟ ಮಧ್ಯಾಹ್ನ ಬಿಸಿಲುಗಾಲ. ಬಳಲಿ ಬಾಯಾರಿದ್ದ ಹೊರಊರಿನ ಹಾರವನೊಬ್ಬನು, ಸಾರ್ವಜನಿಕ ರಸ್ತೆಯಲ್ಲಿರುವ ನಲ್ಲಿಯ ಬಳಿಗೆ ಬರುವನು. ನಲ್ಲಿಯ ಹತ್ತಿರ ಹೋಗಿ ಇನ್ನೇನು ನೀರು ಕುಡಿಯಬೇಕು.

'ನೀವು ಯಾರ್ರೀ'

ಧ್ವನಿಯು ಹತ್ತಿರ ನೆರಳಿನಲ್ಲಿ ಕುಳಿತಿದ್ದ, ಪೋಲಿಸಿನವನದು.

'ಯಾಕಪ್ಪಾ, ನಾನು ಯಾರಾದರೇನು, ಬಾಯಾರಿಕೆ ನೀರು ಕುಡಿಯುತ್ತೇನೆ. ಅಷ್ಟೆ'.

'ಏನ್ರೀ ಈ ಕಾನೂನು ಗೊತ್ತಿಲ್ಲವೇ? ೯೬ ಜನ ದ್ರಾವಿಡರು ನೀರು ಕುಡಿದ ಮೇಲೆ ನಾಲ್ಕು ಜನ ಹಾರವರು ನೀರು ಕುಡಿಯಬಹುದು. ಇನ್ನೂ ೬೦ ಜನ ದ್ರಾವಿಡರೂ ಬಂದಿಲ್ಲ. ನೀವು ಹಾರವರಾದರೆ ಮುಂದಕ್ಕೆ ಹೋಗಿ ೯೬ ಜನ ಮುಗಿದ ನಲ್ಲಿಯ ಹತ್ತಿರ ಹೋಗ್ರೀ.

'ಹಾರವ ಭಯಕಿದ. ಈ ನವನಾಗರಿಕ ರೇಷ್ಯೋ ರಾಜ್ಯದಲ್ಲಿ, ಬಾಯಾರಿಕೆ ಹಾಗಿರಲಿ ನೆತ್ತಿ ಮೇಲೆ ಹಾಲು ಕರೆದ ಹಾಗೆ ಆಯಿತು ಎಂದುಕೊಂಡ. ಹಿಂತಿರುಗಿದ.

* * *

ಹುಡುಗ ಏನು ಚುರುಟೆ ಎನ್ನುತ್ತೀರಿ. ಪತ್ರಕ್ಕೆ ಐದು ರೂಪಾಯಿ ಪರೀಕ್ಷೆ, ಎಸ್ಸೆಂಬಕ್ಕೆ ಮೆದಲು ತರಗತಿಯಲ್ಲಿ ಮೊದಲನೆಯವನಾಗಿ ಉತ್ತೀರ್ಣನಾಗಿದ್ದ. ಅನುಕೂಲಗಳಿದ್ದರೆ, ಉತ್ತಮ ಸಾಹಿತಿ, ವರಿರಾಮನ್, ಕುಮಾರ ಟಾಕೂರ, ಈ ರೀತಿ ಬಾಳುವ ಹುಡುಗ. ವಿಶ್ವವಿದ್ಯಾಲಯದಲ್ಲಿ ಪ್ರೌಢ ವಿದ್ಯಾಭ್ಯಾಸಕ್ಕೆ ಸೇರಿದ. ಆ ವೇಳೆಗೆ ಈ ಕಾನೂನು ಬಂತು

ಸರಿ ಶೇಕಡ ೯೬ ಪಾಠ ಹೇಳಿಕೊಡಲು ಬಂದ ಉಪಾಧ್ಯಾಯರು, ಹುಡುಗ ಬಂದ ವರ್ಷವೆಲ್ಲಾ ಪಾಠ ಕಲಿತುಕೊಂಡರು ಪರೀಕ್ಷೆ ಬಂತು. ಶೇಕಡ ೯೬ ಪರೀಕ್ಷಕರು, ಉತ್ತರದ ಹಾಳೆಗಳ ಮೇಲಿನ ನಂಬರು ಶೇಕಡ ೯೬ರದೇ ಶೇಕಡ ೪ರದೇ ಎಂದು ನೋಡಬೇಕೇ ವಿನಹಾ ಬೇರೆ ಏನೂ ಪ್ರಯಾಸವಿಲ್ಲ ಅಂದ ಮೇಲೆ ಪರೀಕ್ಷೆಯ ಫಲಿತಾಂಶ ಕೇಳಬೇಕೆ? ಹುಡುಗ ಢುಂ'. ಏಕೆಂದರೆ ರೇಷ್ಯೋ ಪ್ರಕಾರ ಅವನ ಸರದಿ ಬಂದಿದ್ದಿಲ್ಲ.

ಆದರೆ ಹುಡುಗನಿಂದ ಪಾಠ ಕಲಿತ ೯೬ ಶೇಕಡದವರು ಆ ಪಾಠಪ್ರವಚನಗಳನ್ನೂ, ಆ ಹುಡುಗನ ಉತ್ತರದ ಹಾಳೆಗಳನ್ನು ಉಪಯೋಗಿಸಿ, ಅದೇ ವಿಶ್ವವಿದ್ಯಾ

ಲಯದಲ್ಲಿ ಡಾಕ್ಟರೇಟ್ ಪ್ರಶಸ್ತಿಯನ್ನು ಪಡೆದರು. ಅದೂ ಶೇಕಡಾ ೯೬ರ ರೇಷ್ಯೋದಲ್ಲಿ.

*   *   *

ಯಾವ ಕಾನೂನಾದರೂ ಆಗಲಿ ಅದಕ್ಕೆ ಒಂದು ಊನ ಬೇಡವೇ. ಎಲ್ಲದ ರಲ್ಲಿಯೂ ರೇಷ್ಯೋ ಪ್ರಕಾರ ಆದರೆ ಒಂದರಲ್ಲಾದರೂ ಶೇಕಡಾ ೪ರವರು ಶೇಕಡಾ ೯೬ರ ಪ್ರಯೋಜನ ಹೊಂದಬೇಡವೇ? ಎಂದನ್ನಿಸಬಹುದು. ಇದೇನು ಮಹಾ! ಇದು ಆಗಿಯೇ ಆಗುತ್ತೆ. ಕಡೆ ಯಾತ್ರೆಯ ಹೊತ್ತಿಗೆ ಆ ಕಾಲಕ್ಕೆ ತಂದೆ ಕಡೆ ಯವರು ಶೇಕಡ ೪. ಮಲತಾಯಿ ಕಡೆಯವರು ಶೇಕಡ ೯೬.

*   *   *

ಇದು ಕಡೆ ಕಡೆಗೆ ಏನಾಯಿತು ಗೊತ್ತೆ? ಕಾನೂನು ಬಲಯುತವಾಗುತ್ತ, ಸಕಲ ಸಂದರ್ಭ ಸನ್ನಿವೇಶಗಳಲ್ಲೂ ಕಾಲಹಾಕುತ್ತಾ ಬಂದಾಗ,

ಖೈದಿಗಳ ಪೈಕಿಕೂಡ ಈ ರೇಷ್ಯೋ ಜಾರಿಗೆ ಬಂತಂತೆ. ಇದೇನೂ ಹೊಸ ದಾಗಲಿಲ್ಲವಂತೆ.

ಸಮರದಿಂದ ಬಿಡುಗಡೆಯಾದ ವಾರಾಂಗನೆಯರಲ್ಲಿಯೂ ಇದೇ ರೇಷ್ಯೋ ಜಾರಿಗೆ ಬಂತಂತೆ

ಮೋಟಾರುಗಳನ್ನು ಕೊಳ್ಳಬೇಕಾದರೆ ಇದೇ ರೇಷ್ಯೋ ಇರಬೇಕಾಯ್ತಂತೆ

ಅಂತೇ ರೈಲ್ವೆ ಪ್ರಯಾಣಮಾಡುವಾಗ ಶೇಕಡಾ ೪ರವರಿಗೆ ಬೇರೆ ಗಾಡಿಗಳನ್ನೇ ಲಗತ್ತಿಸಲಾರಂಭಿಸಿದರಂತೆ

ಹಾಗೆಯೇ ವಿವಾಹಾದಿಗಳಾಗಬೇಕಾದರೂ ಶೇಕಡ ೪ರವರು ಆದ ಮದುವೆ ಗಳಲ್ಲಿ ಶೇಕಡ ೪ರಷ್ಟೇ ಇರಬೇಕಾಯ್ತಂತೆ.

ಹೀಗಾದ ಮೇಲೆ ಶೇಕಡ ೪ರವರಲ್ಲಿ ಶೇಕಡ ೪ರಷ್ಟೇ ಸಂತಾನವಾಗಲಾರಂಭ ವಾಯ್ತಂತೆ.

ಸಿನೀಮಾ ಮನೆಗಳಲ್ಲಿಯೂ ಶೇಕಡಾ ೪ರವರಿಗೇ ಬೇರೆ ಸ್ಥಳ ಏರ್ಪಾಡಾ ಯ್ತಂತೆ.

ಸಂಗೀತಗಾರರಲ್ಲಿಯೂ ಇದೇ ಶೇಕಡಾ ೪ರ ಹಂಚಿಕೆ ಬಂತಂತೆ.

ನಯನಜ ಕ್ಷತ್ರಿಯರಲ್ಲಿ ಶೇಕಡಾ ೪ ಬ್ರಾಹ್ಮಣರಾದರಂತೆ.

ವಿಶ್ವಕರ್ಮಗಳಲ್ಲಿ ಶೇಕಡ ೪ ಹಾವರಾದರಂತೆ.

ಆರ್ಯವೈಶ್ಯರಲ್ಲಿ ಶೇಕಡ ೪ ಆರ್ಯರಾದರಂತೆ.

ಆದಿಕರ್ಣಾಟಕ, ಆದಿದ್ರಾವಿಡ, ಆದಿಅರಬ್ಬೀ, ಆದಿವಂಗ, ಆದಿಮಹಾರಾಷ್ಟ್ರ, ಆದಿಕೇರಳ, ಆದಿಯಾಂಧ್ರ, ಆದಿತಿಗಳ, ಎಲ್ಲದರಲ್ಲೂ ಅಂತ್ಯದ ಶೇಕಡ ೪ ವಿಪ್ರರೇ ಆದರಂತೆ.

ಗುಬ್ಬಿ ಕೂಡ–ಬ್ರಹ್ಮಾಸ್ತ್ರ ಬಿಡಲಾರಂಭಿಸಿತಂತೆ ಅಂತೆ–ಕಂತೆ.

ಚಿತ್ರತಾರೆಯರು

(ಸಿನಿಮಾ ದಾಸರ ಪದ)

—o—

ರಜತ ಪರದೆಯ ಮೇಲೆ ರಂಜಿಸುವ ತಾರೆಯರು ।
ಭರತ ವರುಷದ ಮಾನಿನಿಯನುದ್ಧರಿಪರು ॥ಪ॥

ಕಳೆದ ಕಾಲದ ಹಸಿರು ಬಳೆಯ ತೆಗಳಿರುವಂಥ ।
ಹೊಸ ಲಲನೆಯರ ಕೈಗೆ ಅದನೆ ಇಡಿಸುವರು ॥
ಹಳೆಯ ಕಾಲದ ಪೂನ ಸೀರೆಗಳ ಹಳಿದಂಥ ।
ಹೊಸ ಮುಗುದೆಯರ ಮೈಗೆ ಅದನೆ ಉಡಿಸುವರು ॥೧॥

ಮುಂಗೈಯ ರವಿಕೆ, ಈ ದೊಡ್ಡಂಚು ಬೇಡೆನಗೆ ।
ಎಂದಂಥ ಯುವತಿಯರಿಗದನೆ ತೊಡಿಸುವರು ॥
ನಡುತಲೆಯ ಬೈತಲೆಯು ಬೇಡೆನಗೆ, ಎಡ ಇರಲಿ ।
ಎಂದಂಥ ಮೋಹಿನಿಗೆ ನಡುವೆ ತೆಗೆಸುವರು ॥೨॥

ಹಳೆಯ ಮುತ್ತಿನ ಓಲೆ ಬಹಳ ದೊಡ್ಡದು ಎಂದು ।
ಜರೆದಂಥ ಹುಡುಗಿಯರಿಗದನೆ ಇಡುತಿಹರು ॥
ಒಲೆವ ಬುಗುಡಿಯ ನೋಡಿ ಕಿಸಕಿಸನೆ ನಕ್ಕಂಥ ।
ವನಿತೆಯರ ಕಿವಿಯೊಳಗೆ ಅದನೆ ತೂಗಿಪರು ॥೩॥

ದೊಡ್ಡ ಕುಂಕಮ ನೋಡಿ ಬಿದ್ದಾಡಿ ನಗುತ್ತಿದ್ದ ।
ಚೆಲುವೆಯರಿಗದೆ ಸೊಗಸು ಎಂದು ಪೇಳಿಹರು ॥
ಕುಂಕುಮದ ಮೇಲಿದ್ದ ಕಾಗೆ ಬಂಗಾರವನು ।
ನೋಡಿ ನಗುತಿದ್ದವರಿಗದನೆ ನೀಡಿಹರು ॥೪॥

ಕಾಡಿಗೆಯ ಕಪ್ಪು ಈ ಕಣ್ಣಿಗೇತಕ್ಕೆಂದು ।
ಕೇಳಿದವರಿಗೆ ಈಗ ಅದನೆ ಬಳಿದಿಹರು ॥
ಎಲೆ-ಅಡಕೆ ಬೇಡ ತುಟಿ ಕೆಂಪಾಗುವುದು ಎಂದು ।
ನುಡಿದ ಹೆಣ್ಣಿನ ತುಟಿಗೆ ಕೆಂಪು ಬಳಿಯುವರು ॥೫॥

ಹಳೆಯ ಮುತ್ತೈದೆಯರ ನಖದ ಬಣ್ಣವ ನೋಡಿ ।
'ಥೂ' ಎಂದ ಈ ರತಿಯ ಉಗುರಿಗೊರಸುವರು ॥
ಅವರೆಂತು ಮಾಡಿದರೆ, ಇವರಂತೆ ಮಾಡುವರು ।
ಅವರಿಂದಲೇ ನಮ್ಮ ಹಳೆತು ಬೆಳಗುವುದು ॥೬॥

—ರಾ. ವೆಂ. ಶ್ರೀ.

" ಬನ್ರಿ ! ಬನ್ರಿ ! "

ಸಿಟಿ ಬಸ್ ಕಂಪನಿಗೂ, ನನಗೂ, ಜನ್ಮಜನ್ಮಾಂತರದ ಯಾವುದೋ ದ್ವೇಷ ವಿರಬೇಕೆಂದೇ ನಾನು ನಂಬಿದ್ದೆ, ಮೊನ್ನೆವರೆಗೂ.

ಏಕೆಂದರೆ, ನಾನು ಎಷ್ಟು ಪ್ರಯತ್ನಪಟ್ಟರೂ, ನನ್ನ ಕಿಸೆಯಿಂದ ಅವರ ಬೊಕ್ಕ ಸಕ್ಕೆ ಒಂದು ಕಿಲುಬುಕಾಸೂ ಕೂಡ ಇದುವರೆಗೂ ಸಲ್ಲಿಸಲು ನನಗೆ ಸಾಧ್ಯವಾಗಿಲ್ಲ.

ನಾನೇನೋ ನಿಸ್ಸಂಕೋಚವಾಗಿ ದಿನವೂ ಎಲೆ ಅಡಿಕೆ ಮೆಲ್ಲುತ್ತಾ ೯॥ಗೆ ನನ್ನ ಮನೆ ಸಮೀಪದ ಚಚ್ಚೌಕದಲ್ಲಿ ಹೋಗಿ ನಿಂತು, ೧೧ರ ತನಕ ತಪಸ್ಸು ಮಾಡು ತ್ತಿದ್ದೆ, ಮೊನ್ನೆವರೆಗೂ. ದೂರದಿಂದಲೇ ಬಸ್ಸಿನ ಬಾಗುಬೀಗುಗಳಿಂದ ಅದರೊಳಗಿನ ಜನಜಂಗಲಿಯನ್ನು ನಾನು ಅಂದಾಜು ಮಾಡಿಬಿಡುವೆ. ಆ ಸಾಮರ್ಥ್ಯ ನನಗಿದೆ. ನನಗೊಬ್ಬನಿಗಾದರೂ ಅದರೊಳಗೆ ಸ್ಥಳವಿರಬಹುದೆಂಬ ಭರವಸೆ ತೋರಿದರೆ ನಾನು ಬಲಗೈಯನ್ನು ನೀಡಿ ಬಸ್ಸಿಗಡ್ಡವಾಗಿ ಹಿಡಿಯುವೆ. ಆದರೆ, ಅದರ ವಾಹಕ ಸಂಚಾ ಲಕರಿಬ್ಬರೂ 'ಸೀಟಿಲ್ಲ' ಎಂದು ಕೈ ಅಲ್ಲಾಡಿಸಿ, ಮುಂದೆ ಸಾಗುವರು. " ನೋಡಿ, ಅಪ್ಪಾ! ಒಬ್ಬರಿಗಿಲ್ಲವೆ?" ಎಂಬ ನನ್ನ ದೈನ್ಯದ ದನಿಗೆ ಗಾಡಿಗರೆಲ್ಲ ನಗುವರು. ಹತ್ತು ವರ್ಷಗಳಿಂದ ಗ್ರೇಡ್ ಕೊಡದೆ ಸತಾಯಿಸುತ್ತಿರುವ ನನ್ನ ಸಾಹೇಬರೆದುರು ಹನ್ನೊಂದನೆಯ ವರ್ಷ ಹೋಗಿ ಗ್ರೇಡಿಗಾಗಿ ಗಿಂಜುವ ಧಾಟಿಯಲ್ಲೇ ಅಂಗಲಾಚುವೆ. ಊಹುಂ. ಹಾರನ್ನಿನ ಹೂಂಕಾರವೇ ನನಗೆ ಅವರು ಕೊಡುವ ಉತ್ತರ. ಹೊರಡುವ ಬಸ್ಸಿನ ಹಿಡಿಗೆ ಒಂದು ಸಲ ಕೈಹಾಕಿದ್ದೇ ಲಾಭ—ನನಗೆ !

" ಹೋಗು ! ನಿನಗೇ ಲಭ್ಯವಿಲ್ಲ " ಅಂತ ಶಪಿಸುತ್ತಾ, ಅದರ ಹಿಂದಿನ ಬಸ್ಸಿ ಗಾಗಿ ಕಾಯುವೆ. ಉದ್ದಕ್ಕೂ ಇದೇ ಅನುಭವ. ತಹಲ್‌ವರೆಗೂ ನಾನು ಸಿಟಿ ಬಸ್ಸಿನಲ್ಲಿ ಕುಳಿತದ್ದೇ ಇಲ್ಲ. ಆಫೀಸಿಗೆ ನಡೆದುಕೊಂಡೇ ಪ್ರಯಾಣ. ೧೧-೧೦ಕ್ಕೆ ಸರಿಯಾಗಿ ಆಂಜನೇಯನ ಗುಡಿ ಮುಂದೆ ಎಕ್ಕಡ ಕಳಚಿಟ್ಟು, ರುಮಾಲು ತೆಗೆದು ಕೈಯಲ್ಲಿರಿಸಿಕೊಂಡು, ಒಂದು ಸಲ ತಲೆಬಾಗಿಸುವೆ. ಆಗ, ನೀವು ನನ್ನನ್ನ ನೋಡಿ ರಬಹುದು. ಜಡದೇಹ; ಬಡಮೂತಿ.

'ಸೀಟಿದೆ, ಬನ್ನಿ', ಅಂತ ನನ್ನನ್ನ ಕಂಪನಿಯವರು ಆಹ್ವಾನಿಸುವುದಕ್ಕಾಗಿ ನಾನು ನಿರ್ಲಜ್ಜನೆಯಾಗಿ ಎಷ್ಟೋ ಕಾವಲುಗಾರಿ ನಡೆಸಿದೇನೆ. ಕಂಡಕ್ಟರುಗಳ ಹೆಸರುಗಳನ್ನೆಲ್ಲ ಸಂಪಾದಿಸಿ, ಉರುಹೊಡೆದೆ. ಅವರಿಗೆಲ್ಲ ಮಹಾನವಮಿ ದಿನ ನನ್ನ ವಿಸಿಟಿಂಗ್ ಕಾರ್ಡ್ ಒಂದೊಂದನ್ನ ಕಾಣಿಕೆ ಕೊಟ್ಟೆ. ದಾರಿಯಲ್ಲಿ ಎಲ್ಲಿ ಕಂಡರೂ ಅವರಿಗೆ ಸಲಾಮು ಮಾಡುತ್ತೇನೆ. ಇನ್‌ಸ್ಪೆಕ್ಟರುಗಳನ್ನೂ ಇಂಗ್ಲೀಷಿನಲ್ಲಿ ಮಾತ

ನಾಡಿಸಿದೇನೆ. ಆದರೂ, ಏಕೋ ಏನೋ, ನನಗೂ ಕಂಪನಿಗೂ ದೇವರು ಗಂಟು ಹಾಕಲಿಲ್ಲ.

ಇದಕ್ಕೆ ಕಾರಣ, ಪುರಾಕೃತ ಪರಸ್ಪರ ವೈಷಮ್ಯ, ಅಂತ ಇದ್ದೆ ; ನಿನ್ನೆವರೆಗೂ. ನಿಜಸ್ಥಿತಿ ನಿನ್ನೆ ತಿಳಿದುಹೋಯಿತು.

ನಿನ್ನೆ, ಯಥಾಪ್ರಕಾರ ೧೧ ಹೊಡಿಯಲಿ, ಅಂತ ಕಾದು ನಿಂತಿದ್ದೆ, ಬಸ್ ಸ್ಟಾಪಿನ ಕೆಳಗೆ. ಕಡೇ ಬಸ್ಸಿನವರೂ ಕೂಡ ನನ್ನನ್ನ ನೋಡಿ ನಕ್ಕಾಗಿತ್ತು. ಆಗ ಒಬ್ಬ ಜಟಕಾದವನು ಬಂದು, "ಬನ್ನಿ, ಸ್ವಾಮಿ! ಬಸ್ ಚಾರ್ಜು" ಅಂದ. ಹಾಳು ನನಗೆ ಕುದುರೆ ವಾಸನೆ ಅಂದರೆ ವಾಕರಿಕೆ, ತಲೆನೋವು. ಆದರೂ, ಯಾವುದೋ ಅಜ್ಞಾನದಲ್ಲಿ ಹೂಂ ಅಂತ ಹತ್ತಿ ಕುಳಿತೆ. ನಾನೇ ಮೊದಲನೆಯ ಗಿರಾಕಿ.

ಇನ್ನು ೩ ಜನರು ಬೇಕಲ್ಲಾ. ಸರಿ! ಎಡಕ್ಕೆ ಬಲಕ್ಕೆ ಹಿಂದಕ್ಕೆ ಮುಂದಕ್ಕೆ ಸುತ್ತ–ಹೊಡೆದ, ಗಾಡೀನ. ನಿಂತು ಕೂಗಿದ, ಕೂತು ಕೂಗಿದ. 'ಯಾರ್ರಿ' 'ಬನ್ರಿ' 'ಜೀ' "ವಾರುಂಗೋ" "ರಾಂಡಿ"—ಕೂಗಿದ್ದೂ ಕೂಗಿದ್ದೆ.

ಮೂರು ನಾಲ್ಕು ಮಹನೀಯರು ಗಾಡಿ ಹಿಂದೆ ಬಂದು ಮೂಸಿನೋಡಿದರು ; ಹಾಗೆಯೇ ಹೊರಟುಹೋದರು. ಒಬ್ಬರು ಮಾತ್ರ ಒಂದು ಕ್ಷಣ ಅನುಮಾನಿಸಿದರು. "ಬರ್ತೀರಾ" ಅಂದೆ. "ಇಲ್ಲಪ್ಪ" ಎಂದು ಒಟಗುಟ್ಟುತ್ತಾ ಅವರೂ ಹೊರಟರು. ಆಗಲೇ ಅದೇ ಬಸ್‌ಸ್ಟಾಪಿಂದ ನಾಲ್ಕಾರು ಜಟಕಗಳು ಭರ್ತಿಯಾಗಿ ನಮ್ಮನ್ನು ಅಣಕಿಸುತ್ತ ಕಟಕಟಾಯಿಸುತ್ತಾ ಹೊರಟುಬಿಟ್ಟಿದ್ದುವು. ಆ ನಿರ್ಭಾಗ್ಯ ಸಾರಥಿಯ ಕಡೆ ನಾನೊಮ್ಮೆ ನೋಡಿದೆ ಅವನೂ ನನ್ನ ಕಡೆ ಒಂದೆರಡು ಸಲ ನೋಡಿದ. ಹೌದು. ನಾನೂ ನಿರ್ಭಾಗ್ಯನೆ! ೧೧-೧೦, ಆಗಲೇ. ಆಂಜನೇಯನಿಗೆ ತಲೆಬಾಗುವ ಟೈಂ ಬಂತು.

ಏಕೆ ಹೀಗೆ? ಕುದುರೆ ತಕ್ಕಮಟ್ಟಿಗೆ ನಾಗರಿಕವಾಗಿಯೇ ಇತ್ತು. ಗಾಡಿಯೂ ಕೂಡ ಅಷ್ಟು ಶಿಥಿಲವೇನೂ ಅಲ್ಲ. ಗಾಡಿಯವನು, ಪಾಪ, ನಯವಿನಯಗಳಿಂದ ದಾರಿಗರನ್ನು ಆಹ್ವಾನಿಸುತ್ತಿದ್ದ.

ಮತ್ತೆ ಏಕೆ? ಏಕೆ ಈ ಅಸಹಕಾರ?

ನನ್ನ ತಾಳ್ಮೆ ತಪ್ಪಿತು. ೧೧-೪ಂಕ್ಕೆ ಸಾಹೇಬರು ನನ್ನನ್ನ ಕರೆಸಿ, ದಿನದ ಪ್ರಥಮ ಪ್ರಕ್ಷಾಳನೆ ಮಾಡುವ ಮುಹೂರ್ತ. ಇಳಿದು ಬಿರುಬಿರನೆ ನಡೆಯೋಣ ವೆಂದರೆ,........

"ಅಯ್ಯಾ! ಯಾರೂ ಸಿಗುವಹಾಗಿಲ್ಲ ನಿನಗೆ! ನಾನು ಇಳಿದುಬಿಡುತ್ತೇನೆ. ಇಷ್ಟು ಹೊತ್ತು ಕೂತಿದ್ದಕ್ಕೆ ಬೇಕಾದರೆ ಎರಡಾಣೆ ಕೊಡುತ್ತೇನೆ" ಎಂದೆ. ಅವನು "ದುಡ್ಡುಗಿಡ್ಡು ಬೇಡಿ, ಸ್ವಾಮಿ! ನೀವು ಇಳಿದರೆ, ಸಾಕು, ಸದ್ಯ! ನಿಮ್ಮ ಮುಖ

ನೋಡೀನೇ ಅವರೆಲ್ಲ ಹಾಗೆ ಹೊರಟುಹೋದದ್ದು. ಅವರೆಲ್ಲ ಖಾಯಂ ಗಿರಾಕಿಗಳು. ಯಾವತ್ತೂ ಹೀಗೆ ಹೋದವರಲ್ಲ. ನಿಮ್ಮ ಮುಖಕ್ಕೆ ನಶೀಬು ಕಮ್ಮಿ" ಅಂದ ......

ಇವತ್ತು ಬಸ್ಸಿಗಾಗಿ ಕಾಯಲೇ ಇಲ್ಲ. ಇನ್ನು ಈ ಕೈನೀಡುವುದು ಯಾಕೆ? ಕಂಡಕ್ಟರುಗಳಿಗೆ ಮಾಡುತ್ತಿದ್ದ ಸಲಾಮೆಲ್ಲ, ವಜಾ!

—ಗಂಗಾಧರ.

—o—

ವೈದ್ಯವೃತ್ತಿ

ಅಲೋಪತಿಯಂತೆ, ಆಯುರ್ವೇದವಂತೆ
ಹೋಮಿಯೋಪತಿಯಂತೆ, ಯುನಾನಿಯಂತೆ
ನ್ಯಾಚುರೋಪತಿಯಂತೆ, ಸೈಕೋಥೆರಾಪಿಯಂತೆ
ಕ್ರೋಮೊಪತಿಯಂತೆ, ಅಜ್ಜಿಯಾ ಅಳಲೆಕಾಯಂತೆ
ಏನಾದರೇನು—
ಇವುಗಳ ಕೈಚಳಕದ ಫಲ—ಪಾತಾಳ ಇಲ್ಲ ಅಗ್ನಿಕುಂಡ!

—ಡಿ. ವೆಂಕಟೇಶಮೂರ್ತಿ.

ಕ್ಷಮಾಪಣೆ ಕೇಳಬೇಕಾದ ಮಾತು

ಸಮಾರಂಭಕ್ಕೆ ಹಲವು ಸದಸ್ಯೆಯರ ಹೆಂಡಂದಿರೂ ಬಂದಿದ್ದರು.

* * *

ದಾಸರು ಕೆಲಕೆಲ ಮಾದರಿಗಳನ್ನು ಆಶ್ಚರ್ಯಕರವಾಗುವಂತೆ ಹಾಡಿ ತೋರಿಸಿದರು.

* * *

ಕುಮಾರ ಶಿಂಗಣ್ಣ, ಅವರ ತಂದೆ ತಾಯಿಗಳ ಏಕ ಮಾತ್ರ ಚಿತ್ರ.

* * *

ಮರ ಮತ್ತು ಇಲಾಖೆಯ ಮುಖ್ಯಾಧಿಕಾರಿಗಳು ಆ ಕಾರಿನಲ್ಲಿದ್ದರು.

* * *

ವಿದ್ಯಾವಂತ ಮಹಿಳೆ ಇರುವ ಮನೆಯಲ್ಲಿ ಅವಿದ್ಯಾವಂತರೊಬ್ಬರೂ ಇರುವುದಕ್ಕೆ ಅವಕಾಶವಿರುವುದಿಲ್ಲ.

* * *

ಸಭೆಯ ಕರತಾಡನದ ಮಧ್ಯೆ ಭಾವಚಿತ್ರವನ್ನು ಅನಾದರಣಮಾಡಲಾಯಿತು.

* * *

ಸಾನಿಟರಿ ಇನ್‌ಸ್ಪೆಕ್ಟರುಗಳು ತಾವು ಎಲ್ಲಿ ಕೆಲಸ ಮಾಡುವರೋ ಅಲ್ಲೇ ವಾಸ ಮಾಡಬೇಕೆಂದು ಸಮಿತಿಯವರು ತೀರ್ಮಾನಿಸಿದರು.



“ಏನ್‌ಸ್ವಾಮಿ, ನನ್ನ ವೈದ್ಯದಲ್ಲಿ ಅಷ್ಟು ಅಪನಂಬಿಕೇನೆ ನಿಮಗೆ?—ನಿಮ್ಮ ಅಳಿಯ ಈ ಊರುಬಿಟ್ಟು ಹೋಗೋತನಕ ನಾನು ಔಷ್ಧಿ ಕೊಡ್ಲಿಲ್ವೆ?.....ನಿಮ್ಮ ದೊಡ್ಡಪ್ಪ ಬದುಕಿರೋತಂಕ, ಪಾಪ, ನಾನೇ ಔಷ್ಧಿ ಕೊಡ್ತಿದ್ದೆ.. ಅಷ್ಟ್ಯಾಕೆ... ನಿಮ್ಮಜ್ಜಿ ಸಾಯೋತಂಕ ನಾನು ಔಷ್ಧಿ ಕೊಟ್ಟೆ ಇನ್ನು ಎಷ್ಟು ಬೇಕು........??”

ಅಂಪೈರು

ಒಂದು ಫುಟ್‌ಬಾಲ್ ಮ್ಯಾಚ್ ಮೊದಲಿಂದ ಕೊನೆಯವರೆಗೂ ನಡೆಸಿದ ಆ ಅಂಪೈರ್ ಮಹಾಶಯ ಎಷ್ಟು ಮೈಲಿ ಓಡಿರುತ್ತಾನೆ, ಅಂತ ಯಾರಾದರೂ ಲೆಕ್ಕ ಹಾಕಿದ್ದಾರೆಯೇ? ಆತನ ಸೊಂಟಕ್ಕೆ ಏನಾದರೂ ಸ್ಪೀಡಾಮಿಟರ್ ಸಿಕ್ಕಿಸಿ ಪರೀಕ್ಷೆ ನಡೆಸಿದ್ದಾರೆಯೇ? ಇಲ್ಲದಿದ್ದರೆ, ಅದನ್ನ ಕೂಡಲೇ ಮಾಡಲೇಬೇಕು. ಏಕೆಂದರೆ, ಆ ರೀತಿ ಲೆಕ್ಕ ಹಾಕಿ ನೋಡಬೇಕು ಅಂತ ರಾಬರ್ಟ್‌ಲಿಂಡಿಗೆ ಅನ್ನಿಸಿಬಿಟ್ಟಿದೆಯಂತೆ. ನಿಜ. ಮಿಕ್ಕವರಿಗೆಲ್ಲ ಕೊಂಚ ಕೊಂಚ ಒಂದೊಂದು ಗುಟುಕು ವಿರಾಮ ಸಿಕ್ಕುತ್ತದೆ. ಗೋಳುಕಾಯುವವರೂ, ಅವರ ಮುಂದಿನ ಇಡೀಬೆನ್ನಿನವರೂ ಆಗಾಗ ವಿಶ್ರಾಂತಿ ತೆಗೆದುಕೊಂಡು, ಅರ್ಧವಿರಾಮ ಹಾಕಿಕೊಳ್ಳಬಹುದು. ಕೆಲವು ವೇಳೆ ಇತರರೂ ಕೂಡ, ಸುಸ್ತಿನಿಂದ ಕಣ್ಣು ಕುರುಡು ಕಟ್ಟಿದಾಗ, ಹಿಂಗಾಲು ಕಂಗಾಲಾದಾಗ, ನಿಂತಲ್ಲೇ ನಿಂತು ಶ್ರಮಪರಿಹಾರ ಮಾಡಿಕೊಳ್ಳಬಹುದು. ಆದರೆ, ಅಂಪೈರು?

ಪಾಪ. ಇಲಿ ಹಿಂದಿನ ಬೆಕ್ಕಿನ ಹಾಗೆ, ಚೆಂಡ ಹೋದಕಡೆ ತಾನೂ ಚಂಗ್ ಅಂತ ನೆಗೆಯುತ್ತಿರಬೇಕು. ಆ ಹಾಳು ಚೆಂಡೋ, ಒದೆ ತಿನ್ನಲಾರದೆ, ನೆಲಕ್ಕೆ ಬೀಳ ಲಾರದೆ, ತಲೆಗೆ ತಾಕಲಾರದೆ, ಕಕ್ಕಾಬಿಕ್ಕಿಯಾಗಿ ಹಾರುತ್ತಿರುತ್ತದೆ, ಸತ್ತೆನೋ, ಕೆಟ್ಟೆನೋ, ಅಂತ. ಆಟದ ಬಯಲಿಂದ ಹೊರಕ್ಕೆ ಧಾವಿಸಿದರೂ, ಹುಡುಕಿ ತಂದು ಗೆರೆಮೇಲೆ ನಿಂತು ಎಸೆಯುತ್ತಾರೆ ಒಳಕ್ಕೆ. ಮೂಲೆಯಲ್ಲಿ ಮರೆಯಾಗಿ ಕೂತರೆ, ಒಳಕ್ಕೆ ಒದೆಯುತ್ತಾರೆ. ಅದು ಮಂದಿ ಕಾಲುಸಂದಿನಿಂದ ತೂರಿ ಓಡುತ್ತೆ. ಮಿಕ್ಕವ ರೆಲ್ಲ ಅದಕ್ಕೆ ಮನಬಂದಾಗ ಪಾದಪೂಜೆ ಮಾಡಬಹುದು. ಆದರೆ, ಅಂಪೈರಿಗೆ ಆ ಸ್ವಾತಂತ್ರ್ಯವಿಲ್ಲ, ಆ ಸಂತೋಷವಿಲ್ಲ. ಆತ ಕೇವಲ ಸಾಕ್ಷಿ. ಆತನನ್ನೇ ಅಟ್ಟಿಸಿ ಕೊಂಡು ಆ ಚೆಂಡು ಕುಣಿದಾಡಿದರೂ, ಆತ ಅದನ್ನು ಹೇಗಾದರೂ ಹಿಂದಿಕ್ಕಿ, ತಲೆ ತಪ್ಪಿಸಿಕೊಂಡು ಮರೆಯಾಗಬೇಕೆ ವಿನಹ ಗತ್ಯಂತರವಿಲ್ಲ. ಆದ್ದರಿಂದ, ಎಲ್ಲರಿಗಿಂತ ಶುಶ್ರೂಷೆ ಪುರಸ್ಕಾರ ಆಗಬೇಕಾದದ್ದು ಅಂಪೈರಿಗೇನೆ.

ಅನೇಕವೇಳೆ ಆತನಿಗೆ ಪುರಸ್ಕಾರ ಸಿಗುವುದೂ ಉಂಟು. ಮೈಯೆಲ್ಲ ಮಿಂಚಾಗಿ, ಮುಖವೆಲ್ಲ ಕಣ್ಣಾಗಿ, ಬುದ್ಧಿ ಕಳೆದುಕೊಳ್ಳದ ಹುಚ್ಚನಂತೆ, ಆತ ಅತ್ತಲಿಂದಿತ್ತಲಾಗೆ ಇತ್ತಲಿಂದತ್ತಲಾಗೆ ಕಾನೂನಿನ ಗೆರೆಯ ಮೇಲೆಯೇ ಕುಪ್ಪಳಿಸುತ್ತಾನೆ. ಕ್ರೀಡಾ ಧರ್ಮಕ್ಕೆ ಚ್ಯುತಿ ಬಂದ ಕೂಡಲೆ, ಆ ಸನ್ನಿವೇಶವನ್ನು ಪರಿಶೀಲಿಸಿ, ನ್ಯಾಯಾನ್ಯಾಯ ವಿಮರ್ಶೆಮಾಡಿ, ಒಂದು ತೀರ್ಮಾನಕ್ಕೆ ಬರುತ್ತಾನೆ. ನಿಜಾಂಶ ಏನು ಅಂತ ಗೊತ್ತುಮಾಡಲು ಆತನಿಗೆ, ಸಾವಿರಾರು ರೂಪಾಯಿ ಸಂಬಳದ ಜಡ್ಜಿಗಳಿಗಿರುವ ಹಾಗೆ, ಲಾಯರುಗಳ ವಾದವಿವಾದ ಸಠಪಣೆಯ ಸಹಾಯವಿಲ್ಲ. ಅಲ್ಲಿನ ಹಾಗೆ, ವರ್ಷಾನು

ಗಟ್ಟಲೆಯ ವ್ಯವಧಾನವಿಲ್ಲ. ಅದೇ ಸನ್ನಿವೇಶದಲ್ಲಿ ಇತರರು ಏನು ನಿಶ್ಚಯಿಸಿದ ರೆಂದು ತಿಳಿಸುವ ಗ್ರಂಥರಾಶಿ ಇಲ್ಲ. ಕಂಡ ಕೂಡಲೇ, ಕಂಡದ್ದನ್ನೇ ನಂಬಿ, ತೀರ್ಪು ಕೊಡಬೇಕಾಗುತ್ತೆ. "ಅಬದ್ಧಂವಾ ಸುಬದ್ಧಂವಾ, ಚೆಂಡು ತಂದು ಹೊಡೆಯಿರೋ" ಎಂದು ಶಿಲ್ಪಿಸಿ, ಆಟವನ್ನು ಸಾಗಗೊಳಿಸಬೇಕಾಗುತ್ತೆ. ವಿಚಾರ ಮಾಡಿದರೆ, ಎಂಥ ಭಯಂಕರ ಹೊಣೆಗಾರಿಕೆ ?

ಆತನ ತೀರ್ಪು ಕೂಡ ಆಕಾಶದ ಕೆಳಗೆ, ನೆಲದ ಮೇಲೆ, ಬಟ್ಟಬಯಲಿನಲ್ಲಿ ಬಹಿರಂಗವಾಗಿ ಪ್ರಕಟಿತವಾಗುತ್ತದೆ. ಅದನ್ನು ಹೇಳಿದ ತಕ್ಷಣವೇ ವಿಜಯಾಭಿ ಲಾಷೆಯ ತನಿರಭಸದಲಿ ಕಾಲಾಡಿಸುತ್ತಿರುವ ಆಟಗಾರರಲ್ಲಿ ಅರ್ಧಜನ ಆತನ ವಿರೋಧಿಗಳಾಗುತ್ತಾರೆ ಅವರ ಮನ ಕುಗ್ಗಿದ್ದನ್ನು ಸರಿಪಡಿಸಲು ಕೂಡಲೇ ಅಂಪೈರು ಪ್ರತಿಪಕ್ಷವಿರೋಧವಾಗಿ ಮತ್ತೊಂದು ಸಲ ಶಿಲ್ಪಿ ಊವಬೇಕಾಗುತ್ತದೆ. ಆಟಗಾರರೋ ಭೀತಿ ಮುಚ್ಚಿದ ಕೆಂಡಗಳು. ಅಂಪೈರ್‌ರ ತೀರ್ಪುಗಳನ್ನು ಕೇಳುತ್ತಾ ಕೇಳುತ್ತಾ, ಅವರಲ್ಲಿ ಕೆಂಡತನವೇ ಉಳಿದು ಉರಿಯತೊಡಗುತ್ತದೆ. ಹೀಗೆ, ಯಾರ ನಡುವೆ ತಾನು ಓಡಿಯಾಡಬೇಕಾಗುತ್ತದೋ, ಅಂಥವರನ್ನೇ ಆತ ವೈಮೇಲೆ ಹಾಕಿ ಕೊಂಡು ಬಿಡುತ್ತಾನೆ. ಇದು ತುಂಬಾ ಶೋಚನೀಯ. ಊದಿದರೆ, ಈ ಏಕಾ ದಶರು, ಊದದಿದ್ದರೆ, ಆ ಏಕಾದಶರು,–ಆತನ ತಿಥಿಗಾಗಿ ತವಕಿಸುವರು !

ಅನೇಕಸಲ ದಂಡೋಪದಂಡವಾಗಿ ಬಂದಿರುವ ನೋಟಕರನ್ನೂ ಆತ ವೈ ಮೇಲೆ ಹಾಕಿಕೊಳ್ಳಬೇಕಾದ ಪ್ರಸಂಗಗಳು ಬಂದೊದಗುತ್ತವೆ ಟೂರ್ನಮೆಂಟುಗಳ ಕಟ್ಟ ಕಡೇ ಮ್ಯಾಚುಗಳಲ್ಲಿ ದ್ವಿಜಾತೀಯ ಪಕ್ಷ ಪ್ರತಿಪಕ್ಷಗಳು ಸಮಬಲವಾಗಿ ಹೋರಾಡಿದರೆ, ಊರೂರೇ ಕನಲಿ ಕೂಗಾಡುತ್ತಾ ಮುಸದು ನಿಂತಿರುತ್ತಾರೆ. ಆಗ, ಎಂಥವನ ಎದೆಯಿಂದಲೂ ಶಿಲ್ಪಿ ಊದಲು ಗಾಳಿ ಹೊರಬರುವುದಿಲ್ಲ ; ಪಂಚಪ್ರಾಣ ಗಳೂ ಉಡುಗಿಹೋಗಿರುತ್ತವೆ. ಅಂಪೈರನ್ನು ಧರ್ಮಮೂರ್ತಿ, ನ್ಯಾಯದೇವತೆ, ಎಂದು ಕೊಂಡಾಡುವವರು ಆಗ ವಿರಳ. ಒಂದು ಹೊಳ್ಳೆಯಷ್ಟು ಗಾಳಿಯನ್ನು ಆತ ಅಂದು ಆ ಶಿಲ್ಪಿಯೊಳಗೆ ತೂರಿಸಿ ಊದಿದರೂ, ಅದು ತೂಫಾನಿನಂತೆ ಮಾರ್ದನಿ ಗೊಡುತ್ತದೆ. ಆಟ ಮುಗಿಯುತ್ತಲೂ, ಒಂದು ಪಕ್ಷದವರು ಅಂಪೈರನ್ನು ಎತ್ತಿ ಹೆಗಲಮೇಲೇರಿಸಿ ಮೆರೆಸಲು ಹೆಣಗಾಡುತ್ತಾರೆ; ಮತ್ತೊಂದು ಪಕ್ಷದವರಿಗೂ ಅದೇ ದಾಹ !

ತಲೆ ತಲೆ ಬಿದ್ದುಹೋಗುವುದನ್ನು ತಪ್ಪಿಸಲು ತಾಂಡವವಾಡಿದ ಆ ಅಸಹಾಯ ಶೂರ ತಲೆತಪ್ಪಿಸಿಕೊಂಡು ಹೋಗಬೇಕಾದ ಸಂದಿಗ್ಧವೂ ಒದಗುತ್ತದೆ.

ಇಷ್ಟಾದರೂ, ಆಟಕ್ಕೊಂದು ಅಂಪೈರು ದೊರೆಯುತ್ತಿರುವುದು ನಮ್ಮ ಪುಣ್ಯ.

ನವಕನ್ನಡ ಡಿಕ್ಷನರಿ

ಉಂಡಾಡದ ಭಟ್ಟ: ಉಂಡಾಡಿ ಭಟ್ಟನಲ್ಲದವ; ಕೃತಘ್ನ.

ಕ್ಯಾರ್ಭಟಿಸುವುದು: ಅಗ್ಗವಾದ ಹಳೇ ಕಾರಿನಲ್ಲಿ ಹೋಗುವಾಗ ...

ಕೀಥಾವಿ: ಕೆಳಕ್ಕೆ ಧಾವಿಸುವವನು.

ಕೊಳೇಬರ: ಸ್ನಾನದ ಅಭಾವದಿಂದ........

ಗಡಿಯಾರ ಹೊಡೆಯುವುದು: ಗಡಿಯತನಕ ಚೆಂಡನ್ನು ಹೊಡೆಯುವುದು; ಬೌಂಡರಿ.

ಗಾಯಕಲ್ಪ: ಮುಲಾಮು.

ಚಿತ್ರಹಿಂಸೆ: ಸಿನಿಮ ಮಂದಿರಗಳಲ್ಲಿ ಮಹಾಜನಗಳಿಗಾಗುವ ಶಿಕ್ಷೆ.

ಚಿತ್ರಾಂಗದೆ: ಚಿತ್ರಗಳಿಗೆ ಗದೆ.

ಜ್ಞಾನಗೃಧ್ರ: ವಯೋಗೃಧ್ರವನ್ನು ನೋಡಿ.

ತಾಟಕೀಯತೆ: ಹಲವು ಮಹಿಳೆಯರ ನಾಟಕೀಯತೆ.

ಪಚನಶೂರರು: ಇವರಿಗೆ ಅಜೀರ್ಣವೆಂಬುದಿಲ್ಲ.

ಪಂಕ್ತಿಲಾಭ: ಕವನ ರಚನೆಯಲ್ಲಿ ಒಂದು ಪಂಕ್ತಿ ಸಂಪಾದಿಸಿದಾಗ.

ಬ್ರಹ್ಮಯಜ್ಞ: ಶಿವರಾಜ ತಾಂಡವ.

ಮೀಶಾವರ: ಮೀಶೆ ಹೊತ್ತು ಮಾಡುವ ದೇಶಾವರ.

ಮೇಧಾವಿ: 'ಕೀಥಾವಿ' ನೋಡಿ.

ವಯೋಗೃಧ್ರ: ಜ್ಞಾನಗೃಧ್ರವನ್ನು ನೋಡಿ.

ಹವ್ಯಾಸಂಗ: ಅನೇಕ ಹವ್ಯಾಸಗಳ ನಡುವೆ ಮಾಡುವ ವ್ಯಾಸಂಗ.

—ಸಾರಾಂಶ.

ನವೀನ ಗಾದೆಗಳು

ಹೊಟ್ಟೆಗೆ ಹಿಟ್ಟಿಲ್ಲ; ಜುಟ್ಟಿಗೆ ಜಾವಾ ಬೇಕಂತೆ.

ತಲೆಗೆ ಎಣ್ಣೆ ಇಲ್ಲ; ತನುವಿಗೆ ಜಾವಾಜಿ?

ಡಚ್ಚರಿಗೆ ಹೆಗ್ಗಣಗಳೇ ಮುದ್ದು; ಜಾವಾದವರಿಗೆ ಜಾವಾನೇ ಮುದ್ದು.

ಹೋದೆಯಾ ಚರ್ಚಿಲ್? ಅಂದ್ರೆ, ಅಟ್ಲಿ ಬಾಗಿಲಿಂದ ಹಿಂದಕ್ಕೆ ಬಂದೆ ಅಂದ

ಪ್ರೋಟೆನ್ ಪೆಟ್ಟಿಗೆ ತುಂಬೋಕೆ, ಇಟ್ಟಿಗೆ ಯಾಕೆ? ಕಟ್ಟಿಗೆ ಯಾಕೆ?

ಬೆಳ್ಳಿಗೋಲಿ ಅಂತ ಅಣ್ಣತಮ್ಮಂದಿರ ಮೇಲೆ ಬಾದಿಸುವುದೆ?

ಒಡೆಯಬೇಡ ಮನೇನ, ಅಂದ್ರೆ, ನೀನೇ ಮನೆಹಾಳ, ಅಂದ

ರೇವಣಾತಿ ಹೋದದ್ದೇ ರೇಂಕಾರ.

ಹಗಲು ದೂರಿದ ಪಾರ್ಟಿಯೊಳಕ್ಕೆ, ರಾತ್ರಿ ತೂರಿದ.

"ವಾರು ಮುಗಿಯಿತೆಂದು ಸರ್ಕಾರದವರು ಸುಮ್ಮನಿರುವ ಹಾಗಿಲ್ಲ".... ಹೌದು, ಕೋಮುವಾರು ಹೆಚ್ಚುತ್ತಿದೆ.

* * *

"ಸರ್ಕಾರದವರು ಜ್ಯೋತಿಷ್ಕರಲ್ಲ" (ಉತ್ತರ) .. ಮತ್ತೆ, ಏಕೆ ಮೀನ ಮೇಷ ಎಣಿಸುತ್ತಿದಾರೆ?

* * *

"ಲಂಚ ರುಷುವತ್ತು ನಿವಾರಣಾ ಸಮಿತಿಯಲ್ಲಿ ಪೋಲೀಸು ಅಧಿಕಾರಿಗಳು ಯಾರೂ ಇಲ್ಲವೆ?" (ಪ್ರಶ್ನೆ) "ಇಲ್ಲ" (ಉತ್ತರ) ಅಲ್ಲೂ ಏಕೆ?

* * *

"ಗೋಮಟೇಶ್ವರ ವಿಗ್ರಹದ ವಿಷಯವಾಗಿ ಭೂಗರ್ಭ ಇಲಾಖೆಯೊಂದಿಗೆ ಪತ್ರವ್ಯವಹಾರ ನಡೆಸುತ್ತಿದೇವೆ" (ಉತ್ತರ) ವಿಗ್ರಹ ಇರುವುದು ಅಲ್ಲೋ?

* * *

"ಮದ್ರಾಸಿಂದ ಖಾದಿ ಮೈಸೂರಿಗೆ ಬಂದಿಲ್ಲವೆ"...." ಈ ಪ್ರಶ್ನೆ ಈಗ ಏಳುವುದಿಲ್ಲ"..... .. ನಿಜ. ಖಾದಿ ಧರಿಸಿದವರು ಬಂದಾಗ ಮಾತ್ರ ಏಳುತ್ತದೆ.

ವಿದ್ಯಾಭ್ಯಾಸ ಕ್ರಮದಲ್ಲಿ ಸುಧಾರಣೆಗಳು

—o—

ಈಗಿನ ಪಾಠ ಪ್ರವಚನಗಳು ಆಬಾಲಗೋಪಾಲರಿಗೆ ಪ್ರಿಯವಾಗುವಂತೆ ಮಾಡಲು 'ಕೊರವಂಜಿ'ಯು ಮೂಲಕ ಕನ್ನಡಿಗರ ಜನ್ಮದಾತೃಗಳಿಗೆ ಹಲವು ಸೂಕ್ತ ಸಲಹೆಗಳನ್ನು ಆಗಾಗ ನೀಡಲು ಕಾತುರರಾಗಿರುವೆವು :

(೧) ಜೀವನಕ್ಕೆ ಅತ್ಯವಶ್ಯಕವಾಗಿ ಬೇಕಾಗಿರುವ ಠಕ್ಕಶಾಸ್ತ್ರವನ್ನು ಶಾಲಾ ಕಾಲೇಜುಗಳಲ್ಲಿ ಆದಷ್ಟು ಬೇಗನೆ ಕಲಿಸುವುದು ಅತ್ಯಗತ್ಯ. ಎಳೆ ವಯಸ್ಸಿನಲ್ಲಿ ಅಲ್ಲದ ಸಲ್ಲದ ನೀತಿ ನ್ಯಾಯಗಳನ್ನೂ ಧರ್ಮಸತ್ಯಗಳನ್ನೂ ಬೋಧನೆಮಾಡಿ, ಏರು ವಯಸ್ಸಿನಲ್ಲಿ ಹುಡುಗರನ್ನು ಪೆದ್ದು ಮಾಡುವುದು ಸರ್ವಥಾ ಸರಿಯಲ್ಲ. ವಿಶ್ವ ವಿದ್ಯಾಸಂಸ್ಥೆಗಳಿಂದ ಹೊರಬಂದ ಕೂಡಲೇ ಅವರು ಎದುರಿಸಬೇಕಾದದ್ದು ಜೀವನದ ಕ್ರೂರಸಾಗರದ ಕಠೋರ ಅಲೆಗಳನ್ನಲ್ಲವೆ? ಬೆಳ್ಳಗಿರುವುದೆಲ್ಲ ಕಳ್ಳು, ತೆಳ್ಳಗಿರುವು ದೆಲ್ಲ ಸಿಲ್ಕು, ಕುಳ್ಳಗಿರುವವರೆಲ್ಲ ಪಿಳ್ಳೆ, ಮೆಳ್ಳಗಿರುವುದೆಲ್ಲ ಕಣ್ಣು, ಹಳ್ಳಗಿರುವುದೆಲ್ಲ ತಗ್ಗು ಎಂದು ಅವರು ತಿಳಿದು ಮೋಸ ಹೋಗಬಾರದಲ್ಲವೆ? ಇದಕ್ಕೆ, ಠಕ್ಕಶಾಸ್ತ್ರ ಬೋಧನೆಯೇ ತಕ್ಕ ಪರಿಹಾರ.

ಬಗ್ಗಿದರೆ ಬೆನ್ನ ಮೇಲೆ ಸವಾರಿ, ತಗ್ಗಿದರೆ ತಲೆಯ ಮೇಲೆ ಗೂಬೆ,—ಮಾಡು ವುದು ಹೇಗೆ, ಕೂಡಿಸುವುದು ಹೇಗೆ—ಎಂದು ಅವರು ಕಲಿಯಬೇಕು. ಚಾಣಕ್ಯನ ತಂತ್ರ, ರಂಗೋಲಿ ನುಸುಳಾಟ, ಚೇಳಿನಕೊಂಡಿ ಪ್ರಯೋಗ, ಟಗರುಗಳ ಕಾಳಗ, ಹುಂಜಗಳ ಹೋರಾಟ—ಇವುಗಳಲ್ಲೆಲ್ಲ ಅವರು ಪ್ರವೀಣರಾಗಬೇಕು. ಶೀತರೆ ಮೂಗನ್ನೇ ಮುರಿಯಬೇಕು, ಆಕಳಿಸಿದರೆ ನಾಲಗೆಯನ್ನೇ ನುಲಿಯಬೇಕು, ನಂಬಿ ದರೆ ಗಂಟನ್ನೇ ಹೊಡೆಯಬೇಕು,—ಇವೇ ಜಗತ್ತಿನಲ್ಲಿ ಐಶ್ವರ್ಯಗಳಿಸಿ ಗೌರವ ಮರ್ಯಾದೆ ಕೀರ್ತಿಗಳನ್ನು ಪಡೆಯಲು ಸಾಧನಗಳು. ಇವನ್ನು ಕಲಿಸದೆ, ನಿಜ ಹೇಳುವುದನ್ನೇ ಹೇಳಿಕೊಟ್ಟಲ್ಲಿ, ಈಗ ಉಳಿಗಾಲವೆಲ್ಲಿ? ಶ್ರದ್ಧೆ ಇದ್ದವ ಈಗ ಶ್ರಾದ್ಧದಲ್ಲೇ ಮುಕ್ತಾಯ, ಎಂಬುದನ್ನು ನಮ್ಮ ಬಾಲಕರು ಕರಾಳಕಷ್ಟ ಪರಂಪರೆ ಗಳನ್ನು ಅನುಭವಿಸಿದ 'ಮೇಲೆ' ತಿಳಿದುಕೊಳ್ಳಬೇಕೆ? ಮೊದಲೇ ಏಕೆ ನಾವು ಅವರಿಗೆ ಹೇಳಿಬಿಡಬಾರದು? ಏಕೆ ಹೇಳಿಕೊಡಬಾರದು?.... ....

(೨) ವಿದ್ಯಾಭ್ಯಾಸಕ್ಕೆಂದು ಶಾಲೆಗಳಿಗೆ ಒರುವ ವಿದ್ಯಾರ್ಥಿಗಳು ತಾವು ಅನು ಮೋದಿಸಿ, ತಾವು ಪ್ರೀತಿಸಿ, ಆದರಿಸುವ ಪಠ್ಯವಿಷಯಗಳಲ್ಲಿ ಹೆಚ್ಚು ಶ್ರದ್ಧೆವಹಿಸು ವರು, ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ....ಹಾಗಾದರೆ, "ಕ್ರಿಕೆಟ್ ಕ್ರೀಡೆ" ಯನ್ನೇಕೆ ಶಾಸ್ತ್ರೋಕ್ತವಾಗಿ ಶಾಲೆಗಳಲ್ಲಿ ಹೇಳಿಕೊಡಬಾರದು? ಹೇಳಿಕೊಡದಿದ್ದರೂ ಅದರ ಮೇಲೆ ಏಕ ಪ್ರಶ್ನೆ ಪತ್ರಿಕೆ ಕೊಟ್ಟು, ನಂಬರ್ ಬಂದವರಿಗೆ ಡಿಗ್ರಿಗಳನ್ನು ಹಂಚಬಾರದು? ಇದರಿಂದ ಶಾಲೆಗಳು ಹೆಚ್ಚು ಆಕರ್ಷಣೀಯವಾಗುವುದಿಲ್ಲವೆ? ....ಉದಾಹರಣೆಗೆ, ಈ ಪ್ರಶ್ನೆ ಪತ್ರಿಕೆಯನ್ನು ನೋಡಿ :

— ಕ್ರಿಕೆಟ್ ಶಾಸ್ತ್ರ —

ಕಾಲ ೨ ಗೆಂಟೆ. ಸೆಂಚುರಿ ನಂಬರು.

[ಸಾಧ್ಯವಿದ್ದಷ್ಟು ನಕ್ಷೆಗಳ ಮೂಲಕ ವಿಶದಪಡಿಸಿ]

೧. 'ನೋಬಾಲ್' ಬಹುಮಾನವನ್ನು ಪಡೆದಿರುವವರ ಪೈಕಿ ಆರು ಜನರ ಜೀವನ ಚರಿತ್ರೆಯನ್ನು ಸಂಕ್ಷೇಪಿಸಿ.

೨. ದೇಶೀಯ ಸಂಸ್ಥಾನಗಳಿಗೂ ಭಾರತೀಯ ಕ್ರಿಕೆಟ್‌ಗೂ ಇರುವ ಅನೂಚಾನ ಸಂಬಂಧವನ್ನು ಡಿಸ್ಕಸಿ.

೩. ಆಟ 'ಡ್ರಾ' ಆದಾಗ, ಗೆದ್ದವರು ಯಾರು ಎಂದು ಹೇಗೆ ನಿರ್ಧರಿಸುವಿರಿ?

೪. ಸಿ. ಕೆ. ಸಹೋದರರ "ಸ್ಟೈಲ್"ಗೂ, ನಿಮ್ಮ ಸ್ವಂತ ಸ್ಟೈಲ್‌ಗೂ ಇರುವ ವ್ಯತ್ಯಾಸಗಳನ್ನು ಎರಡು ಓವರುಗಳಿಗೆ ಮೀರದಂತೆ ವಿಶದೀಕರಿಸಿ.

೫. ತಲ್ಯಾರ್‌ಖಾನರ ವ್ಯಾಖ್ಯಾನಗಳಿಂದ ಕ್ರಿಕೆಟ್ಟಿನಲ್ಲಿ ಹರಡಿಕೊಂಡಿರುವ ಗಾಳಿವರ್ತಮಾನವನ್ನು ಕೊಂಡಾಡಿ. ಅಥವಾ, ಖಂಡಾಡಿ.

೬. ಕ್ರಿಕೆಟ್ ಆಟಗಾರರ ಪೈಕಿ ೧೨ ಜನರನ್ನು ಚುನಾಯಿಸಿ, ಅವರಿಗೆ ಪ್ರೇಕ್ಷಕರು ಕೊಟ್ಟಿರುವ ಅಡ್ಡ ಹೆಸರುಗಳನ್ನು ಪಟ್ಟಿ ಮಾಡಿ.

೭. ಇಂಡಿಯಾದೇಶದ ಕ್ರಿಕೆಟ್ಟನ್ನು ಉತ್ತಮಗೊಳಿಸಲು ಹ್ಯಾಸೆಟ್‌ರವರು ಕೊಡುತ್ತಿರುವ ಸಲಹೆಗಳನ್ನು ಕ್ರೋಡೀಕರಿಸಲು ಸಾಧ್ಯವೆ? ಸಾಧ್ಯವಾದರೆ, ಕರಿಸಿ.

೮. ಕೆಳಕಂಡ ಮಾತುಗಳನ್ನು ಯಾವ 'ಕ್ರಿಕೆಟ್‌ಗಾರ' ಯಾವಾಗ ಹೇಳಿದನು? ವಿಸ್ತರಿಸಿ.

೧. ಅಯ್ಯೋ! ಕೈಗೆ ಬಂದದ್ದು, ಕ್ಯಾಚಿಗಿಲ್ಲವಲ್ಲಾ!
೨. ಹೌಸ್‌ದ್ಯಾಟ್?
೩. ಗರಂಗರಂ, ಕಡ್ಲೇಕಾಯಿ!
೪. ಚರ್ಮ ಬೆಳ್ಳಗಿದ್ದರೆ, ಕರ್ಮ ತಪ್ಪೀತೆ?
೫. ತಕೊ! ರಾಜಾ!
೬. ಬೀರೋ, ಭೀಮಾ!
೭. ಪೆಚ್ಚಾದಾಗ ಪಿಚ್ಚನ್ನು ಬೈದ.
೮. ಬೌಲರ್ ಹ್ಯಾಟೆಲ್ಲ ಅಂಪೈರ್ ತಲೆಯ ಮೇಲೆ.
೯. ಎಲ್ಲರಿಗೂ ಒಂದು ಫೀಲ್ಡಾದರೆ, ಎಡಚನಿಗಿನ್ನೊಂದು ಫೀಲ್ಡ್.
೧೦. ಪೇಪರಿಗೆ, ಪೆಪ್ಪರ್ ಬರೆದರೆ, ಆಟ ಖಾರವಾಗುತ್ತದೆಯೇ?



" ನಾನೇನೋ ಕೊಟ್ಟ ಅಳ್ತೆಗೆ ಸರ್ಯಾಗೇ ಹೊಲ್ಸಿರೋದು ಸಾರ್.... ಅಳ್ತೆ ಕೊಟ್ಟಾಗ್ನಿಂದ ನೀವೇ ಬೆಳದ್ಬಿಟ್ಟಿದೀರಿ ಸ್ವಲ್ಪ "

—● ದೀವಳಿಯ(ನ) ಹರಕೆ ●—

ಕಾರ್ತೀಕ ಶುದ್ಧ ದೀವಳಿಗೆ ಒರಲಿಂದು
ಹರುಷದಿಂ ಬಂದಿಹೆವು ಅಳಿಯಂದಿರಿಂದು ;
ಎಳೆಗೆಂಪ ರನ್ನೆಯರ ಕಾಣಬೇಕೆಂದು
ತಿಳಿನಗೆಯ ಎಳೆವೆಂಡಿರರೆ ನೋಟಕೆಂದು
ಮೇಲಾದ ಉಡುಗೊರೆಯ ತಂದಿರುವೆವಿಂದು !

ಬಂದಿರೇಕಿನ್ನೆಂದು ಕೇಳೆ ನೀವಿಂದು
ಮಗಳಿರಲು ನಿಮ್ಮಲ್ಲಿ ಬರುವೆವೆಂದೆಂದೂ !
ತಣಿವಾಲ ಸಕ್ಕರೆಯ ನಮಗೀಯಲೆಂದು
ಮುತ್ತಿನಾರತಿ ಯೆತ್ತಿ ನಗೆಗರೆಯಲೆಂದು
ಸಂತಸದಿ ಬಂದಿಹೆವು ಅಳಿಯಂದಿರಿಂದು.

ಮಳೆ ಬಂದು ಬೆಳೆಯಾಗಿ ಧನಗಳಿಸಿ ಯೆಂದು,
ಧನಕನಕ ವಾಹನವು ನಿಮಗೊದಗಲೆಂದು
ದೀರ್ಘಾಯುರಾರೋಗ್ಯ ನಿಮಗಾಗಲೆಂದು,
ದೀವಳಿಗೆಯುಪಚಾರವೆಲ್ಲ ನಮಗೆಂದು
ಮಾವಂಗೆ ಜಿಪುಣತ್ವವಿಲ್ಲದಿರಲೆಂದು
ಹರುಷದಿಂ ಹರಸುವೆವು ಅಳಿಯಂದಿರಿಂದು !

ಉಡುಗೊರೆಗಳೆಲ್ಲವನು ಕೊಡಿರಿ ನೀವಿಂದೆ,
ಇನ್ನೊಂದು ದೀವಳಿಗೆ ಬಲುದೂರ ಮುಂದೆ
ಕಳುಹಿಕೊಡಿ 'ಜಾಣೆ'ಯನು ಎನ್ನೊಡನೆ ಇಂದೆ,
ಒಮ್ಮನದಿ ಸಂತಸದಿ ಮನಸಾರ ಹರಸಿ
ತಾ ಕೇಳೆ ಅತಿಲಜ್ಜೆ ಎನ್ನವಳು ಸರಸಿ!

ನಿಮ್ಮ ಮಗಳೆನ್ನರಸಿ ನನ್ನ ಮನೆ ಬೆಳಕು
ಎನ್ನೊಳವಳಿಲ್ಲದಿರೆ ಬಾಳೆ ತಲಕೆಳಕು
ರತ್ನದಂಥಾ ಹುಡುಗಿ ಮುತ್ತಿನಾ ಚೆಂಡು,
ಮಾವಯ್ಯ ಹಿಗ್ಗುವಿರಿ ಮೊಮ್ಮಗನ ಕಂಡು !
ಸುಖಶಾಂತಿ ಸಂಪತ್ತು ನಿಮಗಾಗಲೆಂದು
ಸಂತತವು ಹರಸುವೆವು ನಾವೆಲ್ಲ ಬಂದು
ಮಾವಂಗೆ ಮಂಗಳವು ದೀವಳಿಗೆ ಇಂದು.

—ಬುಳ್ಳ.

—ಒಂದು ಸಂವಾದ—

" ಗುರುಗಳೇ ! ಕುಳಿತೋದದೆಯುಂ....ಪರಿಣತಮತಿಗಳ್ " ಎಂದು ನೃಪತುಂಗನು ಯಾರನ್ನು ಕುರಿತು ಹೇಳಿದ ?

ಕನ್ನಡನಾಡಿನವರನ್ನು ಕುರಿತು.

ಹಾಗಾದರೆ, ನಾವಿಂದು ಏಕೆ ಕುಳಿತು ಓದಬೇಕು ?

ಬೇಕಿಲ್ಲ.

ಮತ್ತೆ ಶಾಲಾ ಕಾಲೇಜುಗಳಲ್ಲಿ ಪರೀಕ್ಷೆಗಳನ್ನಿಟ್ಟಿದಾರಲ್ಲಾ. ಅವುಗಳಲ್ಲಿ ಪಾಸು ಮಾಡಬೇಡವೆ? ಗುರುಗಳೇ !

ಅದಕ್ಕೆ ಬೇರೆ ಉಪಾಯವಿದೆ.

ಅದೇನದು, ಗುರುಗಳೇ !

ಹತ್ತಿರ ಬನ್ನಿ, ಹೇಳುತ್ತೇನೆ. ನಿಮ್ಮನ್ನು ಪಾಸು ಮಾಡಿಸದೆ ಗೋಳಾಡಿಸುತ್ತಿರುವುದು ಈಗಿನ ನಿಮ್ಮ. ....ರು ಅವರನ್ನೆಲ್ಲ ತೆಗೆದುಹಾಕಿಬಿಡೋಣ.

ಹೂಂ. ಮಾಡಿಬಿಡಿ, ಗುರುಗಳೆ !

ಆ ಮೇಲೆ, ಪರೀಕ್ಷೆಗಳಲ್ಲಿ ನೀವು ಬರೆಯುತ್ತಿರುವ ಉತ್ತರಗಳನ್ನು ನೋಡಿ ನಂಬರ್ ಹಾಕುವುದಕ್ಕೂ ಶೇಕಡಾವಾರ್ ನಿಮ್ಮವರನ್ನೇ ನಿಯಮಿಸುತ್ತೇನೆ.

ಹೂಂ. ಅದೀಗ ಸರಿಯಾದ ಮಾತು, ಗುರುಗಳೇ ! ಆದರೆ, ಆದರೆ....ನಾವು ಸುಮ್ಮನೆ.....

ಯಾಕ್ರೊ ! ಯಾಕ್ರೊ ಗೊಣಗುತ್ತೀರಿ

ಅಲ್ಲಿಗೂ, ನಾವು ಏನಾರಾ ಉತ್ತರ ಅಂತ ಬರೆಯಬೇಕಲ್ಲವೆ ? ಬರೆಯಬೇಕಾದರೆ . ....

ಬೇಕಿಲ್ಲ. ಶೇಕಡಾವಾರ್ ಪರೀಕ್ಷಕರು ಶೇಕಡಾವಾರ್ ಪಾಸುಗಳನ್ನು ಹಂಚಲೇಬೇಕಾಗುತ್ತೆ. ಪಾಸು, ಕ್ಲಾಸು, ಎಲ್ಲಾನೂ ಕೊಡಿಸೋಣ, ಅವರ ಕೈಲಿ

ಹಾಗಾದರೆ, ನಾವು ಬರೀ ನಮ್ಮ ಕುಲ ಗೋತ್ರ ಬರೆದರೆ ಸಾಕೇ....

ಹೂಂ. ಅಷ್ಟರಲ್ಲೇ ಅವರು ತಿಳಿದುಕೊಳ್ಳುತ್ತಾರೆ. ಅವರನ್ನ ನೇಮಿಸುವುದೇ ಅದಕೆ ತಾನೆ !

ಹಾಗಾದರೆ, ಗುರುಗಳೇ, ನಾವು ಕಾಲೇಜುಗಳಿಗೆ ತಾನೆ ಯಾಕೆ ಬರಬೇಕು. ಪಾಸು ಖಂಡಿತ ಅಂದ ಮೇಲೆ, ಓದೋದು ಯಾಕೆ, ಕಲಿಯೋದು ಯಾಕೆ ?

ಅದೂ ಸರೀನೆ? ಸುಮ್ಮನೆ ಯಾಕೆ ತೊಂದರೆ? ಇದ್ದಲ್ಲೆ ಇದ್ದು ಬಿಡಿ

ಅಂತು, ಕಾಲಕ್ಷೇಪ?

ಅದನ್ನು ಸರಿಯಾಗಿ ರವಾನಿಸಲು ಏರ್ಪಾಟು ಮಾಡೋಣ.

ಆ ಮೇಲೆ, ಚಾಕರಿ?

ಚಾಕರಿ ಕೊಡಿಸೋಣ, ಈ ವಿದ್ಯಾಪೀಠದಲ್ಲೇ. ಎಲ್ಲರಿಗೂ, ಭಾರಿ ಭಾರಿ.

ಅದು ಹೇಗೆ ಗುರುಗಳೆ! "ಕುಲದ ಪ್ರಕಾರ ಕಾನ್‌ವೊಕೇಷನ್" ಅಂತೆ ತಾವು ವ್ಯವಸ್ಥೆಮಾಡಿದ ಮೇಲೆ, ಓದೋದು ಕಲಿಯೋದು ಬೇಕಿಲ್ಲದೆ ಇದ್ದ ಮೇಲೆ, ವಿದ್ಯಾಪೀಠ ಯಾಕೆ, ತಾವು ತಾನೆ ಯಾಕೆ?

ಏಯ್! ಗುರುವಿಗೆ ತಿರುಮಂತ್ರ ಹೇಳುತ್ತೀರಾ? ನನ್ನ ಬುಡಕ್ಕೇ ತಂದಿರಾ? ಧತ್! ಹೋಗ್ರೊ, ಇಲ್ಲಿಂದ... ನಿಧಾನವಾಗಿ ಯೋಚನೆ ಮಾಡುತ್ತೇನೆ. ಏನೋ ಐಬುಕಾಣಿಸುತ್ತಾ ಇದೆ ನನ್ನ ಪಳಾನಿನಲ್ಲಿ.

———o———

ಅಸ್ತ್ರಗಳಲ್ಲಿ ಮಹಾಸ್ತ್ರ

———o———

ಮಹಾಭಾರತ ಯುದ್ಧದೊಳು ಪಾಶುಪತಾಸ್ತ್ರ
ರಾಮಾಯಣ ಯುದ್ಧದೊಳು ನಾರಾಯಣಾಸ್ತ್ರ
ಹದಿನಾಲ್ಕರ ಸಮರದೊಳು, ಜೆಪ್ಲಿನ್ನು, ಯು ಬೋಟು
ಇದೆ ಮುಗಿದ ಕದನದೊಳು, ರಾಡಾರು, ಅಣುಬಾಂಬು
ಇವಕೆಲ್ಲ ಮಿಗೆಲಹುದು ಮಹಾಸ್ತ್ರ–ಮನೆಯ ರಾಣಿಯರ
ಕಣ್ಣೀರಾಸ್ತ್ರ!

—ಡಿ. ವೆಂಕಟೇಶಮೂರ್ತಿ.

———

"ಮೈಸೂರು ಸಂಸ್ಥಾನ: ವಾಯುಗುಣವು ಹಿತಕರವಾಗಿರುವ ಪ್ರದೇಶ" (ಭೂವಿವರಣೆ) ...ಯಾರಿಗೆ?

* * *

"ಜಪಾನ್ ದ್ವೀಪಗಳನ್ನು ಪೂರ್ವದೇಶದ ಬ್ರಿಟಿಷ್ ದ್ವೀಪಗಳು ಎಂದು ಕರೆಯುವರು"....ಇನ್ನು ಮುಂದೆ, ಪಶ್ಚಿಮದ ಅಮೇರಿಕನ್ ದ್ವೀಪಗಳು ಎಂದು ಹೇಳಬೇಕಾಗುತ್ತದೆ.

ಮಗುವಿನ ನಾಮಕರಣ

ಹುಟ್ಟಿದ ಮಗುವಿಗೆ ಹೆಸರೊಂದಿಡಲು
ನನಗು ವಿಮಲೆಗು ದಿನ ಜಗಳ.
ಮಗು ಜನಿಸಿನ್ನೂ ವಾರವೇ ಆದರೂ
ನೋಡಲಿಬೇಕು ಹೆಮ್ಮೆಯದವಳ
ರಾಗಿಣಿ ಇಲ್ಲವೇ ಜಮುನಾಯೆಂದೋ
ಒಲ್ಲದೆ ಹೋದರೆ ಕರುಣಾಯೆಂದೋ
ಇಡಲೇಬೇಕು ಮಗುವಿಗೆ ಹೆಸರನು
ಎನ್ನುತ ವಾದಿಪಳೆನ್ನೆಂದೆ
"ಬೇಡಾ ವಿಮಲೂ ನಾನದನೊಪ್ಪೆ
ಆ ಹೆಸರೊಂದೂ ಚೆನ್ನಿಲ್ಲ
ನಿನ್ನಯ ಅರಿಕೆ ನಿನಗೇ ಚಂದವು
ನಾನವನೊಪ್ಪೆನು ಎಂದೆಂದೂ
'ರಜನಿ'ಯೋ, ಇಲ್ಲವೇ 'ಸುಜಯ'ನುಯೆಂದೋ
ಎಮ್ಮೀಕಂದಗೆ ಹೆಸರಿಡುವ"
ಎನ್ನುವ ಮಾತದು ಮುಗಿಯುವ ನೊದಲೇ
ಸಿಂಹಿಣಿಯಂತೆ ಕೆಳುವಳು
"ನಿಮ್ಮಯ ಮಾತೋ"...."ನಿಮ್ಮಯ ಮೆದುಳೋ"....
"ರಜನೀಯಂತೆ ರಜನಿ
ನನ್ನಯ ಕಂದಗೆ ...ನನ್ನಯ ಚಿನ್ನಗೆ ...
'ರಜನೀ'ಯೆಂಬಾ ಹೆಸರೊಲ್ಲೆ
ಬಲವಂತದಿ ಆ ಹೆಸರಿಟ್ಟಿರಿಯೆಂದರೆ
ಊರಿನ ಕೆರೆಯೇ ಎನ್ನಗತಿ".
ನಾಮಕರಣದ ಹಬ್ಬದ ದಿನಕೇ, ಅಮ್ಮನು
ಬಂದಳು ಊರಿಂದ
ಮೊಮ್ಮಗಳನು ನೋಡಿ, ಹಿರಿಹಿರಿ ಹಿಗ್ಗುತ್ತ ನುಡಿದಳು
'Verdict' ಅ'ನೀ ರೀತಿ,
"ಮುತ್ತಜ್ಜಿ ರೂಪನು ಹೋಲ್ವ ಈ ಕಂದಗೆ,
ಮುತ್ತಜ್ಜಿ ಹೆಸರೇ ಇಡಬೇಕು"
ನಮ್ಮಾ ಚೆಲುವಿನ ನಮ್ಮಾ ಮುದ್ದಿನ
ಪ್ರೀತಿಯ ಮಗಳಿಂದು—ಗುಂಡಮ್ಮ!

—ಡಿ. ವೆಂಕಟೇಶಮೂರ್ತಿ, ಹೈದರಾಬಾದು (ದಕ್ಷಿಣ).

ನಮ್ ಬೇಬಿ! ಅಥವಾ "ಮನೆಗೆ ಮಾರಿ"

"ನಮಸ್ಕಾರ, ಡಾಕ್ಟ್ರೇ! ಏನೂ ಇಲ್ಲ, ಸುಮ್ಮನೆ ಬಂದೆ–ನಮ್ ಬೇಬೀನ ಹಾಗೇ ತೋರಿಸ್ಕೊಂಡು ಹೋಗೋಣ ಅಂತ. ಈಗೇನೂ ಇಲ್ಲ ಅನ್ನಿ, ಕೆಮ್ಮಲು ಗಿಮ್ಮಲು ಎಲ್ಲಾ ವಾಸಿ, ಸ್ವಲ್ಪ ಅನ್ನ ತಿಂತಾನೆ. ಕಾಲಪ್ರವೃತ್ತೀನೂ ದಿನಕ್ಕೆ ಒಂದೇ ಸರ್ತಿ....ಸುಮ್ಮನೆ ಒಂದು ಸಲ ನಿಮಗೆ ತೋರಿಸಿಬಿಟ್ಟರೆ ನಮ್ಮ ಮನಸ್ಸಿಗೆ ನೆಮ್ಮದಿ....ಹೊಟ್ಟೆ, ಗಿಟ್ಟೆ ಎಲ್ಲಾ ಸರಿಯಾಗಿದೆ ತಾನೆ? ಹಾಗೇ ಸ್ವಲ್ಪ 'ಲಂಗ್ಸ್'ನೂ ನೋಡಿಬಿಡಿ....ನಾನು ತಿಳಿದುಕೊಂಡೆ, ಏನೂ ಇಲ್ಲಾಂತ. ಆದರೂ ನೀವು ನೋಡಿಬಿಟ್ಟರೆ ಬೇಡ, ಬೇಡ, ಔಷಧಿ ಯಾಕೆ? ನಾನೂ ಅದಕ್ಕೇ ಸೀಸೇನೂ ತರಲಿಲ್ಲ. ಎಲ್ಲಿ, ಬೇಬಿ, ಡಾಕ್ಟರಿಗೆ ನಮಸ್ಕಾರ ಮಾಡು! ನಮಸ್ತೇ ಅಂತ ಹೇಳು!–ಬೇಗ ಹೇಳಮ್ಮಾ!–ಅವರಿಗಿನ್ನೂ ಬಹಳ ಜನ ಕಾದುಕೊಂಡಿದಾರೆ. ಹೋಗಲಿ, ಬಿಡು, ಎಲ್ಲಿ ಅವರಿಗೆ ಒಂದು 'ಷೇಕ್ ಹ್ಯಾಂಡ್' ಕೊಟ್ಟುಬಿಡು–ಅಕೋ ನೋಡಿ, ಡಾಕ್ಟರೆ, ನಮ್ ಬೇಬಿ ಎಷ್ಟು ಚೆನ್ನಾಗಿ 'ಷೇಕ್ ಹ್ಯಾಂಡ್ಸ್' ಕೊಡ್ತಾನೆ! ಅಯ್ಯೋ, ಇದೇನೋ ಬೇಬಿ! ಈಗತಾನೆ ಮನೇಲಿ ಆಗಿತ್ತಲ್ಲೋ! ಅಯ್ಯೋ, ಡಾಕ್ಟರ ಮೇಜೆಲ್ಲಾ ಗಲೀಜು ಮಾಡಿಬಿಟ್ಟೆಯಲ್ಲ!....ಒಂದು ಬಟ್ಟೇನೂ ತರಲಿಲ್ಲವಲ್ಲ–ಒರಸಿ ಬಿಡಬಹುದಾಗಿತ್ತು. ಒಂದು ಬಟ್ಟೆ ಇದೆಯೇ? ಪರವಾಯಿಲ್ಲವೇ?... ನಾನು ಹಾಗಾದರೆ ಬೇಬೀನ ಕರದುಕೊಂಡು ಹೋಗಲೇ? ಅಯ್ಯೋ ಪಾಪ, ನಿಮಗೆ ಸುಮ್ಮನೆ ತೊಂದರೆಕೊಟ್ಟ ಹಾಗಾಯಿತು. ನಮಸ್ಕಾರ, ಡಾಕ್ಟರೇ–ನಿಮ್ಮ ಬಿಲ್ಲು ಜ್ಞಾಪಕ ಇದೆ.. ಮುಂದಿನ ತಿಂಗಳು....ಬೇಬೀ, ನೀನೂ ಡಾಕ್ಟರಿಗೆ ನಮಸ್ತೇ ಅಂದು ಬಿಡು–ಓಹೋ, ಮತ್ತೆ ಷೇಕ್ ಹ್ಯಾಂಡ್ಸ್ ಮಾಡ್ತೀಯಾ? ಇಲ್ಲಿ ನೋಡಿ, ಡಾಕ್ಟರೇ, ಮತ್ತೆ ಕೈನೀಡ್ತಾನೆ–ಎಷ್ಟು ಜಾಣ ನಮ್ ಬೇಬೀ. ಬಾ! ಹೋಗೋಣ ಬಾ, ಹೊತ್ತಾಯಿತು—ಆ ಮೇಲೆ ಅಮ್ಮ ಬೈತಾಳೆ! ಬರ್ತೀನೆ, ಡಾಕ್ಟ್ರೇ ...".

* * *

"ನಮ್ ಮಗೂ ಗಂಟಲು ತೋರಿಸಿಕೊಂಡು ಹೋಗೋಣಾಂತ ಬಂದೆ. ಆಚೇಬೀದಿ ಪಾರ್ವತಮ್ಮನವರ ನಾದಿನಿ ಮಗನಿಗೆ ಗಂಟಲೇನೋ ಊದಿಕೊಂಡು ಹುಣ್ಣಾಗಿ ಆಪರೇಷನ್ನು, ಇಂಜೆಕ್ಷನ್ನು ಎಲ್ಲಾ ಮಾಡಬೇಕಾಗಿ ಒಂತಂತೆ, ನಮ್ಮವಳು ಹೇಳಿದಳು. ಅಷ್ಟಕ್ಕೆಲ್ಲಾ ಯಾಕೆ ಜಾಗಕೊಡಬೇಕು ಅಂತ ಈಗಲೇ ಕರೆದು ಕೊಂಡು ಬಂದೆ. ನೋವೆ? ಗಂಟಲು ನೋವು, ಗೀವು ಅಂತ ಏನೂ ಹೇಳೋಲ್ಲ ....ಹ್ಞೂಂ, ಹಾಲು ಕುಡೀತಾನೆ, ಅನ್ನಗಿನ್ನ ತಿಂತಾನೆ, ನುಂಗೋದರಲ್ಲೇನೂ ಕಷ್ಟ ಕಾಣಿಸೋದಿಲ್ಲ. ಆದರೂ ಒಂದುಸಲ ತೋರಿಸೋಣ ಅಂತ ನಮ್ಮ ಮನಸ್ಸಿನ ಗಾಬರಿ—ಗೊತ್ತೇ ಇದೆಯಲ್ಲ!....ಎಲ್ಲಿ, ಮಗು, ಬಾಯಿತೆಗೆ, ಡಾಕ್ಟರು ಗಂಟಲು

ನೋಡಲಿ, ತೆಗೆಯೋ....ತೆಗೆಯಪ್ಪ....ಜಾಣ ನೀನು —ಸಕ್ಕರೆ ಕೊಡ್ತಾರೆ, ತೆಗೆ. ಡಾಕ್ಟರೇ, ನಮ್ ಮಗೂಗೆ ಸ್ವಲ್ಪ ಸಕ್ಕರೆ ಕೊಡಿ....ಅಕೋ ನೋಡು, 'ಗ್ಲೂಕೋಸ್' ಕೊಡ್ತಾರೆ— ನಮ್ ಮಗೂಗೆ ಅದಲ್ಲಾ ಅಭ್ಯಾಸವಾಗಿಬಿಟ್ಟಿದೆ, ಡಾಕ್ಟರೆ; ಮನೇಲಿ ಅವನು ಅಳು ಶುರುಮಾಡಿದ ಅಂದರೆ 'ಗ್ಲೂಕೋಸು'! ಈಗ ಅದು ಸಿಗೋದು ಕಷ್ಟವ್ರೋ—ಕೊಟ್ಟಹೊರತೂ ಬಿಡೋಲ್ಲ ಅಷ್ಟು ಹಠಮಾಡ್ತಾನೆ! ಎಲ್ಲಪ್ಪಾ, ಗ್ಲೂಕೋಸ್ ತಿಂದೆಯಲ್ಲಾ, ಬೇಗ ಬಾಯಿತೆರ, ಗಂಟಲು ತೋರಿಸು. ತೋರಿಸುವುದಿಲ್ಲವೆ? ತೋರಿಸಪ್ಪಾ, ಅವನಿಗೆ ಹೊತ್ತಾಯಿತು ಹೋಗಲಿ, ಇನ್ನೊಂದು ಸ್ವಲ್ಪ ಸಕ್ಕರೆ ಕೊಡಿ, ಡಾಕ್ಟ್ರೇ ಈಗಲೂ ತೋರಿಸುವುದಿಲ್ಲವೇ? ಹ್ಞಾಂ, ಹಾಗೇ ಮಾಡಿ, ಬಲವಂತದಿಂದ ಒಂದು ಚಮಚ ಹಾಕಿ ಗಂಟಲು ನೋಡಿ, ಡಾಕ್ಟ್ರೇ! ಅಯ್ಯೋ, ಏನೋ ಹೀಗೆ ಮಾಡ್ತಿ, ಮಗೂ! ಡಾಕ್ಟರ ಮುಖದ ಮೇಲೆಲ್ಲಾ ಉಗಿದುಬಿಟ್ಟೆಯಲ್ಲಾ!—ಅದೂ ಅವರು ಕೊಟ್ಟ ಗ್ಲೂಕೋಸೆಲ್ಲಾ ತಿಂದುಬಿಟ್ಟು! ಚೆನ್ನಾಯಿತು! ನನ್ನ ವಸ್ತ್ರ ಕೊಡಲೆ, ಡಾಕ್ಟರೇ? ಪರವಾಗಿಲ್ಲವೆ? ನಿಮ್ಮದೀಗ ಸಹನೆ, ನೋಡಿ! ಡಾಕ್ಟರುಗಳಿಗೆ ಸಹನೆ ಇಲ್ಲದಿದ್ದರೆ ಹೇಗೆ? ಅಲ್ಲದೆ, ನಿಮಗೂ ಮಕ್ಕಳು, ಮರಿ, ಇಲ್ಲವೇ ಪಾಪ!....ಹೊತ್ತಾಯಿತಲ್ಲವೆ? ಹೌದು, ನನಗೂ ಹೊತ್ತಾಯಿತು. ಎಲ್ಲಿ, ಈಗ ನೋಡಿಬಿಡಿ, ಬಲವಾಗಿ ಅಲ್ಲಾಡದಹಾಗೆ ಹಿಡಿದು ಕೊಳ್ಳುತ್ತೇನೆ....ಏನೂ ಇಲ್ಲವೆ? ಒಳಗೆ ಕಾಣಿಸಿತೆ? ಖಂಡಿತವಾಗಿ ಏನೂ ಇಲ್ಲ ಅಂತೀರಾ? ನಮಗೇನೋ ಗಾಬರಿ!...ಆದರೆ, ನೀವು ಹೇಳಿಬಿಟ್ಟರೆ, ಸರಿ ನಾನು ಇನ್ನು ಹೊರಡುತ್ತೇನೆ, ಡಾಕ್ಟ್ರೆ, ನಮಸ್ಕಾರ ಮಗೂ, ಡಾಕ್ಟರಿಗೆ ಗುಡ ಮಾರ್ನಿಂಗ್ ಮಾಡು—ಎಡಗೈಯಲ್ಲಲ್ಲ ಬಲಗೈಯಲ್ಲಿ ನೋಡಿ, ಡಾಕ್ಟ್ರೆ, ನಮ್ ಮಗು ಎಷ್ಟು ಚೆನ್ನಾಗಿ ಗುಡ್‌ಮಾರ್ನಿಂಗ್ ಮಾಡ್ತಾನೆ! ಬಲುಜಾಣ ನಮ್ ಮಗು! ಇದೇನು ನಿಮ್ಮ ಕೈ ರಕ್ತ? ನಮ್ ಮಗು ಗೀರಿಬಿಟ್ಟಿದ್ದ? ಅಯ್ಯೋ ಪಾಪ ಹೌದು, ಉಗುರು ಬೆಳೆದುಬಿಟ್ಟಿದೆ, ಕತ್ತರಿಸಬೇಕು ಬೇಗ ಈಗಲೇ ಸ್ವಲ್ಪ ಟಿಂಚರ್ ಬಳೀರಿ ಅದಕ್ಕೆ!... ನಮಸ್ಕಾರ ”

* * *

"ಏನೋ ಸ್ವಲ್ಪ ಉಷ್ಣವಾಯು ಕೆರಳಿದ ಹಾಗಾಗಿತ್ತು—ಕೈತೋರಿಸಿಕೊಂಡು ಹೋಗೋಣ ಅಂತ ಬಂದೆ, ಡಾಕ್ಟರೇ! ಇಲ್ಲ, ಮಗೂಗೇನೂ ಇಲ್ಲ ಸುಮ್ಮನೆ ಮನೇಲಿ ಚೇಷ್ಟೆ ಮಾಡುತ್ತಿದ್ದ—ಹಾಗೇ ಕರೆದುಕೊಂಡು ಬಂದೆ.. ಇಲ್ಲ, ಕೆಮ್ಮಲಿಲ್ಲ, ಜ್ವರವಿಲ್ಲ, ವೈಕ್ಕೆ ನೋವು ಅದೆಲ್ಲಾ ಏನಿಲ್ಲ ಹೊಟ್ಟೆ ಏನೋ ಸಲ್ಪ ಭಾರವಾಗಿತ್ತು. ಹಸಿವಿಲ್ಲ ನೆನ್ನೆ ಊಟಾನೆ? ಅಂಥಾ ಊಟವೇನೂ ಇರಲಿಲ್ಲ. ಎಲ್ಲೋ ಒಂದು ಹತ್ತು ಆಂಬೊಡೆ ತಿಂದಿದ್ದೆ—ಅದರಿಂದ ಹೀಗಾಗಿರ ಹುದೆ?....ಹೌದು, ಸ್ವಲ್ಪ ಈರುಳ್ಳಿ ಪಕೋಡಾನೂ ತಿಂದಿದ್ದೆ...ಲೇ, ಚಿನ್ನಾ! ಸುಮ್ಮನೆ ಇರಮ್ಮಾ, ಅದನ್ನೆಲ್ಲಾ ಮುಟ್ಟಬಾರದು—ಡಾಕ್ಟರು ಬೈತಾರೆ! ಅಷ್ಟೇ ಅಂತೀರಾ! ಒರೀ ಅಜೀರ್ಣ ತಾನೆ? ಇನ್ನೇನೂ ಅಲ್ಲವಲ್ಲ? ಅಯ್ಯೊ, ಅದ್ನೆಲ್ಲಾ ಎಳೀಬಾರದಮ್ಮ,

ಚಿನ್ನ ! ಕಾಗದ ಎಲ್ಲಾ ಬಿದ್ದು ಹೋಗುತ್ತೆ ...ಏನೂ ದಿಗಿಲುಪಡಬೇಡಿ, ಡಾಕ್ಟರೇ, ನಮ್ಮ ಮಗು–ಚಿನ್ನ–ಸುಮ್ಮನೆ ನೋಡ್ತಾಳೆ, ಅಷ್ಟೆ ಏನೋ ಚಪಲ–ಎಲ್ಲಾನೂ ಎಂದು ನೋಡೋದು, ಎಷ್ಟಾದರೂ ಹೆಣ್ಣು ಜಾತಿಯಷ್ಟೆ! ...ಹಾಗಾದರೆ, ಇವತ್ತು ಊಟಮಾಡದಿದ್ದರೆ ಸರಿ, ತಾನೆ? ಔಷಧೀನೆ? ಔಷಧಿಯಾಕೆ, ಡಾಕ್ಟರೆ! ಮನೇಲಿ ಸ್ವಲ್ಪ ಮೆಣಸಿನಸಾರು ಮಾಡಿಸಿ ಕುಡಿದುಬಿಡುತ್ತೇನೆ. ಇವತ್ತು ನೋಡೋಣ, ನಾಳೆ ಬೇಕಾದರೆ ಸೀಸೆ ತರುತ್ತೇನೆ—ಅಯ್ಯೋ, ಅದೇನೆ ಮಾಡಿದಿ, ಚಿನ್ನ ! ಕೆಳಗೆ ಎತ್ತಿಹಾಕಿಬಿಟ್ಟೆಯಾ! ಒಡೆದುಹೋಯ್ತೆ ಡಾಕ್ಟರೆ?..ಬಹಳ ಬೆಲೆಯಾದದ್ದೆ? ಐವತ್ತು ರೂಪಾಯಿ? ಅಷ್ಟು ಚಿಕ್ಕದಕ್ಕೆ? ಈಗ ಅಂಥಾದ್ದು ಸಿಕ್ಕೋದೇ ಇಲ್ವೆ?... ಅಯ್ಯೋ, ತುಂಟ ಹುಡುಗಿ, ಹೀಗೆ ಮಾಡಿಬಿಟ್ಟೆಯಲ್ಲೆ! ನಿಮ್ಮ ಅಮ್ಮನ ಹತ್ತಿರ ಹೇಳ್ತೀನೆ, ನೋಡು!.. ಹೇಳಿದರೆ, ಅವಳು ನನ್ನನ್ನೇ ಬೈತಾಳೆ! ಹೋಗಲಿ, ಬಿಡು, ಅಳಬೇಡ. ಚೂರುಗಳನ್ನೆಲ್ಲಾ ತೆಗೆದು ಹಾಕಲೆ, ಡಾಕ್ಟರೆ? ಏನೂ ಬೇಡಾಂತೀರಾ? ಪಾಪ, ನಿಮಗೆ ತೊಂದರೆಯಾಗುತ್ತೇನೋ ಅಂತ ಏನೋ, ನೀವಾ ಈ ಹೊತ್ತಿಗೆ ಸುಮ್ಮನಿದೀರಿ–ನಿಮ್ಮ ಮಕ್ಕಳ ಹಾಗೇಂತ ಅಂದುಕೊಂಡು . ಪಾಪ, ನಿಮಗೆ ನಮ್ಮಿಂದ ಒಳ್ಳೆ ನಷ್ಟ, ಇವತ್ತು ಹೊತ್ತಾಯಿತು, ಹೊರಡುತ್ತೇನೆ....ಬಾ, ಚಿನ್ನ, ಡಾಕ್ಟರಿಗೆ ಹೋಗಿ ಬರುತ್ತೇನೆ ಎಂದು ಹೇಳು ಇನ್ನೊಂದು ದಿವಸ ಬಂದು ಪುರುಸತ್ತಾಗಿ ನನ್ನ ಡ್ಯಾನ್ಸು ತೋರಿಸುತ್ತೇನೆ ಎಂದು ಹೇಳು .."

* * *

"ಲೋ, ಮರಿ! ಊಟ ಆಯ್ತೇನೋ, ಅಪ್ಪ ಬಂದರು, ನೋಡು! ನೆನ್ನೆ ಹೇಳಿದ್ದು ಚಾಕೊಲೇಟು, ಅಂಗಿ ಎಲ್ಲಾ ತಂದೆಯಾ ಅಂತ ಕೇಳು, ಹೋಗು.... ಅಯ್ಯೋ, ಇದೇನ್ರೀ, ಹೀಗೆ ಒದ್ದುಬಿಟ್ಟಿರಿ, ಮಗೂನ! ಫುಟ್ ಬಾಲ್ ಒದ್ದ ಹಾಗೆ! ಪಾಪ, ಅದೇನು ಮಾಡಿತು, ಮಹಾ? ಊಟಮಾಡುತ್ತಿದ್ದ ಕೈಲಿ ಹಾಗೇ ಓಡಿ ಬಂತು, ಚಾಕೊಲೇಟ್ ತಂದಿದ್ದೀರೇನೋ ಅಂತ....ಜಿಡ್ಡಿನ ಕೈಯಿಂದ ನಿಮ್ಮನ್ನು ಮುಟ್ಟಿದಾಕ್ಷಣ ಏನಾಯಿತು, ಬಟ್ಟೆ ಅಗಸನಿಗೆ ಹಾಕಿದಾಗ ಹೋಗುತ್ತಿರಲಿಲ್ಲವೆ, ಕೊಳೆ? ಒಳ್ಳೆ ಡಾಕ್ಟರು ನೀವು! ಇಷ್ಟು ಮುಂಗೋಪವಾದರೆ ಹೇಗೆ? ತಿಳಿಯದ ಮಗೂನ ಹಾಗೆ ಒದೆಯೋದೆ? ನಿಮಗ್ಯಾಕೆ ಹೇಳಿ ಮಕ್ಕಳು, ಮರಿ! ಕಂಡೋರ ಮಕ್ಕಳು ಏನು ಮಾಡಿದರೂ ನಗುತ ನಗತಾ, ಅವರು ಆಡಿದ ಹಾಗೆಲ್ಲಾ ಆಡಿಕೊಂಡು, ಮಾಡಿದ್ದೆಲ್ಲಾ ಸಹಿಸಿಕೊಂಡಿರುತ್ತೀರಿ ಮನೇಗೆ ಬಂದರೆ, ಬಂದುಬಿಡುತ್ತೆ, ಏನೋ ಆವೇಶ! ಹೆತ್ತ ತಂದೆ ಅಂತ, ಪಾಪ, ಮಗು ಹತ್ರ ಬಂದರೆ ಹಾಗೆ ಹೈಕಿಕ್ ಹೊಡೆದುಬಿಡೋದೆ? ಮನೇಗೆ ಮಾರಿಯಾಗಿದ್ದೀರಿ...".

—ಬೀ.

ಊರೆಲ್ಲ ತಂಗಿಯರು

ನನಗಾಗ ಹದಿನಾರು
ಅವಳಿಗೋ ಬರಿ ಆರು
ಸ್ನೇಹವಾಯಿತು ಎಂದೋ, ಹೇಗೋ
ಸ್ನೇಹ ಬೆಳೆಯಿತು ಆಟದಲಿ ನಗುವಿನಲಿ
ಸ್ಕೂಲಹೊತ್ತಿನಲಿ ಕದ್ದ ತಿಂಡಿಯಲಿ
ನಾನೊಬ್ಬ ರಾಜ ಅವಳೊಬ್ಬ ರಾಣಿ
ಊರ ಊರೇ ನಮಗೆ ರಾಜಧಾನಿ
ಆದರೆಷ್ಟುದಿನ ಈ ರಾಜ್ಯಭಾರ?
ಬಂದಲೊಂದುದಿನ ರಾಜ, ನಿಜವಾದ ರಾಜ
ಅಂದೆ ನನಗೆಂದಳು ನೀನನಗೆ ಅಣ್ಣನೆಂದು
ನನಗೇನೂ ತಂಗಿಯರು ಬೇಕಿದ್ದ ಹಾಗೆ—
ನನಗಾಗ ಇಪ್ಪತ್ತು
ಅವಳಿಗೋ ಬರಿ ಹತ್ತು
ಆಗಲೇ ಊರೆಲ್ಲ ನಮ್ಮನಾಡಿದರು
ಮೊದಮೊದಲು ಅನುಮಾನ, ಗಂಭೀರ
ಅದುವೆ ಮುಂದಿನ ಕಣ್ಣುಗಳ ನಗು
ಆ ನಗುವೆ ಹೃದಯಗಳ ಮೇಲ್ಕರೆದು
ರಾಜ ರಾಣಿಯ ಪದವಿಗೇರಿಸಿತು
ಆಗಲೂ ನಿಜವಾದ ರಾಜ ಬರಬೇಕೇ?
ರಾಣಿಯೂ ವರಿಸಿದಳು ನನ್ನನೇ ಮರೆತು.
ಅವಳು ನನಗೆಂದಳು ನೀನನ್ನ ಅಣ್ಣನೆಂದು
ನನಗೇಕೋ ತಂಗಿಯರು ಸಾಲದೆಂದು.—

ನನಗೆ ಇಪ್ಪತ್ತೈದು
ಆಕೆಗ್ಹದಿನೈದು
ಬಲು ಚೆಲುವೆ ಎಂದರು ನೆಂಟರೆಲ್ಲ
ಹಾಡಿಸಿ ನೋಡಿದರು. ಕಂಠ ಸರಿಯಿತ್ತು
ಓದಿಸಿ ನೋಡಿದರು. ಜ್ಞಾನವಿತ್ತು
ಇನ್ನೇನು, ತಡವೇಕೆ ? ಅಂದರು.
ಜಾತಕವು ತರಿಸಾಯ್ತು, ನೋಡಾಯ್ತು
ಆದಿರಲಿ, ಬೇರೊಂದು ಜಾತಕವು ಯಾರದದು ?
ಆದುವೆ ನಿಜವಾದ ರಾಜನದು, ಸರಿಹೋಯ್ತು.
ನಾನೆ ಅವಳನು ಕರೆದೆ ತಂಗಿಯೆಂದು
ಊರೆಲ್ಲ ತಂಗಿಯರು, ನಾನೆ ಅವರಣ್ಣ—
ತಂಗಿಯರ ಲೋಕದಲಿ ಯಾವುದೂ ಭಯವಿಲ್ಲ
ಹ್ಯಂಗಿಲ್ಲದೆ ತಲೆಯೆತ್ತಿ ನಡೆಯುವಣ್ಣಂದಿರಿಗೆ.

—"ಕೇಘ".

—o—

"ಕೃಷ್ಣರಾಜಸಾಗರದಲ್ಲಿ ನೀರು ದಾಸ್ತಾನಿಲ್ಲದೆ ರೈತರಿಗೆ ತೊಂದರೆಯಾಗಿದೆ ಎಂಬ ವರದಿ ಸರ್ಕಾರಕ್ಕೆ ಬಂದಿಲ್ಲ" (ಉತ್ತರ) ...ವರದಿ ಬರುವುದಕ್ಕೂ Proper channel ಬೇಕಲ್ಲಾ !

* * *


"ಇಂಡಿಯಾದೇಶದಲ್ಲಿ ಸುಮಾರು ೪೩ ಕೋಟಿ ಕುರಿಗಳಿವೆ"........ತೋಳಗಳು ?

* * *

"ಇಂಡಿಯಾದೇಶವನ್ನು ಬ್ರಿಟಿಷ್ ಚಕ್ರಾಧಿಪತ್ಯದ ಕಣಜವೆನ್ನಬಹುದು"........ಹೌದು. ಗೂಡೆದ್ದುಬಿಟ್ಟರೆ.

* * *

"ರಾಂಚಿ 'ಬೀಹಾರ್ ಮತ್ತು ಒರಿಸ್ಸಾ ಪ್ರಾಂತ'ದಲ್ಲಿದೆ" ಬೇಸಿಗೆಕಾಲಕ್ಕೆ ಬೀಹಾರ, ಚಳಿಗಾಲಕ್ಕೆ ಒರಿಸ್ಸಾದಲ್ಲಿ ಇರಬಹುದು.



"ಹೊದ್ರಾತ್ರಿ ಬಂದ್ರೆ ಸಾಮಾನ್ಯಾದ್ರೆ ಅಲ್ಲಕಣಯ್ಯ",

ಚಿತ್ರ ಪತಾಕೆ

(ಶ್ರೀನಿವಾಸಾಯನಮಃ)

ವಿನೂ, ಹಜಾರೆ, ವಿಜಯ, ಮುಷ್ಟಕ್,
ಪಾಚ್ಕ್ಸ, ಬಾನರ್ಜಿ,
ಕಿಷನಚಂದ, ಪಾಲಿಯ, ಮುರಾರಿ,
ಪಾಟಿಯಾಲ, ಮೋಡಿ—

ಸೀಕೆ. ನಾಯುಡು, ಸೀಎಸ್. ನಾಯುಡು,
ದೇವಧರ, ಮಿಲ್ಲರ್,
ತಾರಾಪೂರೆ, ಗುಲ್ಲು ಮುಹಮ್ಮದ,
ರಾಂಸಿಂಗ್, ರೀಗೆ—

ಪಟೌಡಿ, ಜಾರ್ಡಿನ, ಎಲ್ಲಿಸ್,
ಎಮ್ಮೊಶೀನ, ವೆಂಟಿ,
ವಿಜಯನಗರ, ಸಾರಥಿ, ನಾವಲೆ,
ಹಿಂಡ್ಲೇಕರ, ವೈ. ಎಸ್—

ಶ್ಯಾಮಸುಂದರಾ, ಕಾಂಪ್ಟನ್,
ಮಂತ್ರಿ, ಕಾರ್ಮೋಡಿ,
ಅಮರನಾಥ, ಕ್ರಿಸ್ಟೊಫಾನಿ,
ಸಫಿ, ಸಿಸ್ಕಿ, ಬ್ರೌನ್—

ಇಲಾಹೀ, ರಂಗಚಾರಿ, ಪ್ರೈಸ್,
ತಿಮ್ಮಪಯ್ಯ, ಕಿಟ್ಟಿ
ಸರವಟೆ, ಪೆಪ್ಪರ್, ವಿಲಿಯಂಸ್,
ರಣಜಿತ, ಹ್ಯಾಮಂಡ್—

ಎಂಥ ಹೆಸರಿವು! ಎಮ್ಮ ಬಾಲಕರ
ಮನದಿ ನಟ್ಟ ಹೆಸರು!
ಸೆಂಚುರಿಗಳವೊಲು ಇನಿದು! ಬಲ್ಲವರ
ಗೂಗಲಿಯವೊಲು ಮೆಲಿತು!

ಕೇಳುವ ಕೈ ಮಿಡಿಯುತಿವೆ! ನುಡಿಯುವ
ನಾಲಗೆ ಕಿಡಿಯುತಿದೆ.

ಬೌಲಂತಿರೆ ರನ್ನಿಂತಾಯ್ತೆನ್ನುತ,
ಜೋರುತಲಿದೆ, ಮನಸು !—

ಸಣ್ಣ ತಮ್ಮದಿರಾ ! ಚಿಣ್ಣಿಕೋಲಿಗರ !
ಹೇಳುವಿರೀ ಹೆಸರ !

ಚಿನ್ನವಾಗಿಹವು ಈಗಳು ಹೆಸರು,
ಬೌಲು ಅಂತೆ ಇಹುದೆ ?—

ಫೀಲ್ಡಲಿ ಹೊಡೆದಾ ಸೀಮೋಲ್ಲಂಘನ
ಸಿಕ್ಸರ ನವ ಚಂಡು !

ಸುತ್ತ ನಿಲ್ಲಿರಿ ! ತದುಕುತ ಬಡಿಯಿರಿ !
ಹೇಸಿ ಸೋಂಬತನವ !—

ನೆನೆಯುವ ಹೆಸರಿನ ಕಲಿತನ ಕೈಯಲಿ
ಮರಳಿ ಕರೆಯಿಸಿರಿ !


ಉತ್ತಮ ಕ್ರೀಡೆಯ ಚಿತ್ರ ಪತಾಕೆಯ
ಮೆರೆಯಿಸಿ ಬಾನಿನಲಿ.

"ಐಕ್ಯವನ್ನು ವೈಪರೀತ್ಯಗಳ ಖಂಡವೆನ್ನುತ್ತಾರೆ"... ಡಚ್ಚರೂ ಫ್ರೆಂಚರೂ ಈಗ ಹಾಗೆನ್ನುತ್ತಿದಾರೆ, ನಿಜ.

* * *

"ಡೇನರು ಶಾಸ್ತ್ರೀಯವಾಗಿ ಬೆಣ್ಣೆ ತೆಗೆದು ಇಂಗ್ಲೆಂಡಿಗೆ ರಫ್ತು ಮಾಡುತ್ತಾರೆ" ....ಇನ್ನು ಮೇಲೆ, ರಷ್ಯಾವಿಗೆ ಕಳುಹಿಸಬೇಕಾಗುತ್ತದೆ.

* * *



XII INDIAN OLYMPIC GAMES

AND

INDO-CEYLON MEET

WRESTLING-WEIGHT LIFTING
ATHLETICS

Feb. 5th, 6th, 7th, 8th, 9th, 10th, 1946.

SAMPANGI TANK - BANGALORE CITY.

For Advertisement, Stalls, Etc.

Apply to Organising Secretary.

The Mysore Olympic Competitions.

9th, 10th, 11th, 12th, JAN. 1946.

Selection of Competitors

TO BE MADE

FOR THE XII I. O. GAMES OF 1946.

FOR PARTICULARS

Apply To

Mr A C. DAS.
Y. M C A
BANGALORE CITY.

ಭಾರತೀಯ ಕಾರ್ಮಿಕರಿಂದ

ಭಾರತೀಯ ಬಂಡವಾಳಗಾರರಿಂದ

ಭಾರತೀಯ ಕಲಾಕೌಶಲ್ಯದಿಂದ

ಕೂಡಿರುವುದೇ

—o—

ಬೆಂಗಾಲ್ ಲ್ಯಾಂಪ್ಸ್

ತಯಾರಿಕೆಯ ವೈಶಿಷ್ಟ್ಯ

ಭಾರತದಲ್ಲೆಲ್ಲಾ ಉತ್ತಮವಾದುದೆಂದು

ಖ್ಯಾತಿಪಡೆದಿದೆ



ಪಂಡಿತಪಾಮರರುಗಳ
ಮೆಚ್ಚಿಗೆಗೆ ಪಾತ್ರವಾಗಿ
ನೋಡಿದವರೇ ಮತ್ತೆ
ಮತ್ತೆ ನೋಡುತ್ತಿರುವ
ಕನ್ನಡ ಚಿತ್ರ

**ಇದುವರೆಗೂ ಬಂದ ಕನ್ನಡ ಚಿತ್ರಗಳಲ್ಲೆಲ್ಲಾ
ಅತ್ಯುತ್ತಮವಾದುದೆಂದು ಪತ್ರಿಕೆಗಳಲ್ಲಿ
ವಿಮರ್ಶಿಸಲ್ಪಟ್ಟ ಚಿತ್ರ**

ಗುಬ್ಬಿ ಹೇಮರೆಡ್ಡಿ

ಮಲ್ಲಮ್ಮ

KARNATAKA *Release*

ತಾರಾಗಣ.—ನಾಟಕರತ್ನ ಜಿ. ಹೆಚ್. ವೀರಣ್ಣ, ಜಯಮ್ಮ,
ಹೊನ್ನಪ್ಪ ಭಾಗವತರ್, ಅಭಿನವ ಭಕ್ತಶಿರೋಮಣಿ ಸಿ. ಬಿ. ಮಲ್ಲಪ್ಪ.

**ಬೆಂಗಳೂರು-ಸೂಪರ್, ಮೈಸೂರು-ಚಾಮುಂಡೇಶ್ವರಿ
ದಾವಣಗೆರೆ-ವಿನೋದ**

**ಟಾಕೀಸುಗಳಲ್ಲಿ ಅತ್ಯಂತ ಯಶಸ್ವಿಯಾಗಿ 5-10-45 ರಿಂದ
ನಡೆಯುತ್ತಿದೆ.**

Printed by B S Iyengar, Bangalore City
Publisher—B. N Gupta Editor—M. Shivaram